ಶಕ್ತಿಗೆ ತಕ್ಕ ದಾನ ಗುರುಪೂಜನ ಸುವ್ರತ ಪರ್ವಕಾಲನಿ–|
ರ್ಭಕ್ತಿಗಳಂ ನೆಗಳ್ಚುತೆ ಜಿನಾಗಮಗೋಷ್ಠಿಗಳಲ್ಲಿ ಧರ್ಮಸಂ–||
ಯುಕ್ತರ ಮೇಳದೊಳ್ ಕಳೆಯುತುಂ ದಿನಮುಂ ನಡೆವಂಗೆ ಮೋಹದಾ–|
ಶಕ್ತಿ ಸಡಿಲ್ದು ಪೋಪುದಿದು ಭಕ್ತಿಯಲಾ ಅಪರಾಜಿತೇಶ್ವರಾ ! ||೩೩||

ಶಕ್ತಿಗೆ ತಕ್ಕ ದಾನ ಗುರುಪೂಜನ ಸುವ್ರತ ಪರ್ವಕಾಲ ನಿರ್ಭಕ್ತಿಗಳಂ
ನೆಗಳ್ಚುತೆ, ಜಿನಾಗಮಗೋಷ್ಠಿಗಳಲ್ಲಿ, ಧರ್ಮಸಂಯುಕ್ತರ
ಮೇಳದೊಳ್ ಕಳೆಯುತುಂ ದಿನಮುಂ ನಡೆವಂಗೆ, ಮೋಹದ
ಆ ಶಕ್ತಿ ಸಡಿಲ್ದು ಪೋಪುದು, ಇದು ಭಕ್ತಿಯಲಾ ಅಪರಾಜಿತೇಶ್ವರಾ !

ಶಕ್ತಿಗೆ ತಕ್ಕ ದಾನ–ಶಕ್ತಿ ಎಷ್ಟಿದೆಯೊ ಅಷ್ಟು ದಾನವನ್ನೂ (ಕೊಡುವುದು), ಗುರುಪೂಜನ–ಗುರುಗಳ ಪೂಜೆಯನ್ನೂ (ಮಾಡುವುದು), ಸುವ್ರತ–ಶ್ರೇಷ್ಠವಾದ ವ್ರತವನ್ನೂ, ಪರ್ವಕಾಲ ನಿರ್ಭಕ್ತಿಗಳಂ–ಪರ್ವಕಾಲಗಳಲ್ಲಿ ಉಪವಾಸಗಳನ್ನೂ, ನೆಗಳ್ಚುತೆ–ಮಾಡುತ್ತಲೂ, ಜಿನಾಗಮ ಗೋಷ್ಠಿಗಳಲ್ಲಿ–ಜೈನಾಗಮ, ಶಾಸ್ತ್ರಸಂಬಂಧವಾದ ಸಭೆಗಳಲ್ಲಿಯೂ, ಧರ್ಮಸಂಯುಕ್ತರ ಮೇಳದೊಳ್–ಧರ್ಮಾತ್ಮರ ಸಹವಾಸದಲ್ಲಿಯೂ, ದಿನಮುಂ–ದಿನವನ್ನು, ಕಳೆಯುತುಂ–ಕಳೆಯುತ್ತಲೂ, ನಡೆವಂಗೆ–ನಡೆಯುವವನಿಗೆ, ಮೋಹದ ಆ ಶಕ್ತಿ–ಮೋಹದ ಆ ಶಕ್ತಿಯು, ಸಡಿಲ್ದು ಪೋಪುದು–ಸಡಿಲಿಹೋಗುವುದು, ಇದು ಭಕ್ತಿಯಲಾ–ಇದು ಭಕ್ತಿಯಲ್ಲವೇ ? ಅಪರಾಜಿತೇಶ್ವರಾ !

ಯಥಾಶಕ್ತಿಯಾಗಿ ದಾನವನ್ನು ಕೊಡುವುದು, ವೀತರಾಗಿ ಮುನಿಗಳ ಸೇವೆಯನ್ನು ಮಾಡುವುದು, ಶ್ರೇಷ್ಠವಾದ ವ್ರತಗಳನ್ನು ಕೈಗೊಂಡು ಅವುಗಳನ್ನು ಪಾಲಿಸುವುದು, ಉತ್ತಮ ತಿಥಿಗಳಲ್ಲಿ, ಪರ್ವಕಾಲಗಳಲ್ಲಿ ಉಪವಾಸವನ್ನುಮಾಡಿ ಆತ್ಮಧ್ಯಾನದಲ್ಲಿ ಕಾಲವನ್ನು ಕಳೆಯುವುದು, ಜಿನವಾಣಿಯ ಅಧ್ಯಯನ ಮತ್ತು ಧಾರ್ಮಿಕ ಸಭೆಗಳಲ್ಲಿ ಭಾಗವಹಿಸುವುದು, ಧರ್ಮಾತ್ಮರ ಸಹವಾಸವನ್ನುಮಾಡಿ ಧರ್ಮಬುದ್ಧಿಯನ್ನು ವೃದ್ಧಿಮಾಡಿಕೊಳ್ಳುವುದು–ಹೀಗೆ ಹಲವು ವಿಧಗಳಲ್ಲಿ ತನ್ನ ಪ್ರತಿದಿನದ ಸಮಯವನ್ನು ಕಳೆಯುವವನಿಗೆ ಮೋಹನೀಯ ಕರ್ಮದ ಬಿಗಿ ಕಮ್ಮಿಯಾಗುತ್ತದೆ. ಈ ತೆರನಾದ ಸಾಧನೆ ಮಾಡುತ್ತ ಮಾಡುತ್ತ ಕಾಲ ಕಳೆದರೆ ಕರ್ಮದ ನಿರ್ಜರೆ ಸಾಧ್ಯವಾದೀತು. ಇದನ್ನೇ ಭಕ್ತಿಯೆಂದು ಕರೆಯುವುದು. ಈ ಭಕ್ತಿಯನ್ನು ಬಿಡದೆ ಆಚರಿಸಿದರೆ ಮುಂದಿನ ಮಾರ್ಗ ಸುಗಮವಾಗುತ್ತದೆ,

ಮಾಡುವುದರ್ಕೆ ಶಕ್ತಿ ತನಗೊಚ್ಚತಮಿಲ್ಲದೊಡೊಲ್ದು ಧರ್ಮಮಂ |
ಮಾಡುವರಲ್ಲಿ ನೋಡಿ ಪರಿಣಾಮುವನೆಯ್ದುವುದೊರ್ಮೆ ನೋಳ್ಪುದುಂ ||
ಕೂಡದೊಡಂತೆ ಕೇಳ್ದು ಸುಖಿಯಪ್ಪುದು ನಿಮ್ಮನೆನಂಬಿ ಧರ್ಮಮಂ |
ಜೋಡಿಸಿಕೊಂಬುದರ್ಕೆ ಬಿರಿಸುಂಟೆ ಜನಕ್ಕಪರಾಜಿತೇಶ್ವರಾ ! ||೩೪||

ಮಾಡುವುದರ್ಕೆ ಶಕ್ತಿ ತನಗೆ ಒಚ್ಚತಂ ಇಲ್ಲದೊಡೆ, ಒಲ್ದು ಧರ್ಮಮಂ
ಮಾಡುವರಲ್ಲಿ ನೋಡಿ ಪರಿಣಾಮುವಂ ಎಯ್ದುವುದು, ಒರ್ಮೆ ನೋಳ್ಪುದುಂ
ಕೂಡದೊಡೆ ಅಂತೆ ಕೇಳ್ದು ಸುಖಿಯಪ್ಪುದು, ನಿಮ್ಮನೆ ನಂಬಿ
ಧರ್ಮಮಂ ಜೋಡಿಸಿಕೊಂಬುದರ್ಕೆ ಬಿರಿಸುಂಟೆ ಜನಕ್ಕೆ ಅಪರಾಜಿತೇಶ್ವರಾ !

ತನಗೆ, ಮಾಡುವುದರ್ಕೆ ಶಕ್ತಿ ಒಚ್ಚತಂ–ಮಾಡುವುದಕ್ಕೆ ಸರಿಯಾದ ಶಕ್ತಿ, ಇಲ್ಲದೊಡೆ–ಇಲ್ಲದಿದ್ದರೆ, ಒಲ್ದು–ಪ್ರೀತಿಸಿ, ಧರ್ಮಮಂ ಮಾಡುವರಲ್ಲಿ–ಧರ್ಮವನ್ನು ಮಾಡುವವರಲ್ಲಿ, ನೋಡಿ, ಪರಿಣಾಮವಂ–ಪರಿಣಾಮವನ್ನು, ಎಯ್ದುವುದು–ಹೊಂದುವುದು, ಒರ್ಮೆ–ಒಂದುವೇಳೆ, ನೋಳ್ಪುದುಂ–ನೋಡುವುದಕ್ಕೆ, ಕೂಡದೊಡೆ–ಕೂಡದಿದ್ದರೆ, ಅಂತೆ–ಹಾಗೆ, ಕೇಳ್ದು–ಕೇಳಿ, ಸುಖಿಯಪ್ಪುದು–ಸುಖಿಯಾಗುವುದು. ನಿಮ್ಮನೆ ನಂಬಿ–ನಿಮ್ಮನ್ನೇ ನಂಬಿ, ಧರ್ಮಮಂ–ಧರ್ಮವನ್ನು, ಜೋಡಿಸಿಕೊಂಬುದರ್ಕೆ–ಅಳವಡಿಸಿಕೊಳ್ಳುವುದಕ್ಕೆ, ಜನಕ್ಕೆ–ಜನರಿಗೆ, ಬಿರಿಸುಂಟೆ–ಕಷ್ಟವಿದೆಯೇ ? ಅಪರಾಜಿತೇಶ್ವರಾ !

ಒಂದುಸಮಯ ದಾನ ಧರ್ಮವನ್ನು ಮಾಡಲು ನಮಗೆ ಶಕ್ತಿಯಿಲ್ಲದಿದ್ದರೆ, ಅಂತಹ ಉತ್ತಮ ಕೆಲಸಗಳನ್ನು ಮಾಡುವ ಧರ್ಮಾತ್ಮರನ್ನು ಕಂಡು, ಆ ಧರ್ಮಕಾರ್ಯಗಳಲ್ಲಿ ಪಾಲ್ಗೊಂಡು ಮನಸ್ಸಿನ ಪರಿಣಾಮವನ್ನು ಶುಭಮಾಡಿಕೊಳ್ಳಬೇಕು. ಒಂದುವೇಳೆ ಆ ಧರ್ಮಕಾರ್ಯಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಿದ್ದರೆ ಅದರ ವಿವರಗಳನ್ನು ನೋಡಿದವರ ಬಾಯಿಂದ ಕೇಳಿ ಸುಖಪಡಬೇಕು. ಧರ್ಮವನ್ನು ಅನುಸರಿಸುವುದಕ್ಕಾಗಲೀ, ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕಾಗಲೀ ಹಣ ಕೊಡಬೇಕಾಗಿಲ್ಲ. ಭಗವಂತನ ಧ್ಯಾನ, ಮನಸ್ಸಿನ ಶುಭ ಪರಿಣಾಮ ಇವುಗಳೇ ಸಾಕಲ್ಲವೇ ? ಇದನ್ನು ಮಾಡಲು ಏನು ಕಷ್ಟ ಈ ಜನಗಳಿಗೆ !

ಹವಣಿಸಿ ಕೊಂಬುದೊಯ್ಯನೆ ಪರಿಗ್ರಹಮಂ ಗತಿನಾಲ್ಕರಂದಮಂ |
ಶಿವಪದದಂದಮಂ ತಿಳಿಯುತಿರ್ಪುದು ಕಾಯದ ಕಷ್ಟಮಂ ನಿಜಾ-||
ತ್ಮವಿಪುಲಶುದ್ಧಿಯಂ ನೆನೆಯುತಿರ್ಪುದು ಕೂಡೆ ವಿರಕ್ತಿ ತಾನೆ ಸಂ-|
ಭವಿಪುದು ದೇಹಿಗೆಂದೊರೆವುದೋಜೆಯಲಾ ಅಪರಾಜಿತೇಶ್ವರಾ ! ||೩೫||

ಹವಣಿಸಿ ಕೊಂಬುದು ಒಯ್ಯನೆ ಪರಿಗ್ರಹಮಂ, ಗತಿನಾಲ್ಕರ ಅಂದಮಂ
ಶಿವಪದದ ಅಂದಮಂ ತಿಳಿಯುತಿರ್ಪುದು, ಕಾಯದ ಕಷ್ಟಮಂ
ನಿಜಾತ್ಮ ವಿಪುಲಶುದ್ಧಿಯಂ ನೆನೆಯುತಿರ್ಪುದು, ಕೂಡೆ ವಿರಕ್ತಿ ತಾನೆ
ಸಂಭವಿಪುದು ದೇಹಿಗೆ, ಎಂದು ಒರೆವುದು ಓಜೆಯಲಾ ಅಪರಾಜಿತೇಶ್ವರಾ !

ಒಯ್ಯನೆ-ಕ್ರಮಕ್ರಮವಾಗಿ, ಪರಿಗ್ರಹಮಂ-ಪರಿಗ್ರಹಗಳನ್ನು, ಹವಣಿಸಿಕೊಂಬುದು-ಪರಿಮಿತ ಮಾಡಿಕೊಳ್ಳುವುದು, ಗತಿನಾಲ್ಕರ-ಚತುರ್ಗತಿಗಳ, ಅಂದಮಂ-ರೀತಿಯನ್ನು, ಶಿವಪದದ ಅಂದಮಂ-ಮೋಕ್ಷಪದವಿಯ ಅಂದವನ್ನೂ, ತಿಳಿಯುತಿರ್ಪುದು-ತಿಳಿಯುತ್ತಿರುವುದು, ಕಾಯದ ಕಷ್ಟಮಂ-ಶರೀರದ ದುಃಖವನ್ನೂ, ನಿಜಾತ್ಮ ವಿಪುಲ ಶುದ್ಧಿಯಂ-ತನ್ನ ಆತ್ಮನ ಅಧಿಕವಾದ ಪರಿಶುದ್ಧತೆಯನ್ನೂ, ನೆನೆಯುತಿರ್ಪುದು – ಸ್ಮರಿಸುತ್ತಿರುವುದೂ, ಕೂಡೆ – (ಈ ಕ್ರಮವನ್ನು ಅನುಸರಿಸಿದ) ಕೂಡಲೆ, ದೇಹಿಗೆ-ಜೀವಿಗೆ, ವಿರಕ್ತಿ-ವಿರಕ್ತಿಯು, ತಾನೆ ಸಂಭವಿಪುದು-ತಾನೆ ಉಂಟಾಗುವುದು, ಎಂದು ಒರೆವುದು-ಹೀಗೆ ಹೇಳುವುದೇ, ಓಜೆಯಲಾ-ಸರಿಯಾದುದಲ್ಲವೇ ? ಅಪರಾಜಿತೇಶ್ವರಾ!

ಪರಿಮಿತಿ ಪರಿಗ್ರಹವ್ರತವನ್ನು ನಿಷ್ಠೆಯಿಂದ ಪಾಲಿಸುತ್ತ ಲೌಕಿಕ ವಿಷಯಾಸಕ್ತಿಗಳ ಕಡೆ ಗಮನ ಹರಿಸದೆ ನಿತ್ಯತೃಪ್ತನಾಗಿರುವುದು, ಚತುರ್ಗತಿಗಳ ಚಕ್ರಕ್ಕೆ ಸಿಕ್ಕಿ ತಾನು ಹೇಗೆ ಭವಬಂಧನಕ್ಕೆ ಸಿಲುಕಿರುವೆನೆಂದು ಚಿಂತಿಸುವುದು, ಕರ್ಮನಿರ್ಜರೆ ಸಾಧ್ಯವಾಗಿ ಮೋಕ್ಷಸಾಮ್ರಾಜ್ಯ ಪದವಿಯನ್ನು ಪಡೆಯುವ ಆನಂದವನ್ನು ಮೆಲುಕುಹಾಕುವುದು, ಅಶಾಶ್ವತವೂ, ಜಡವೂ, ಅಚೇತನವೂ, ಮಲಭರಿತವೂ ಆದ ತನ್ನ ದೇಹದ ಬಗ್ಗೆ ಮತ್ತು ಅದಕ್ಕೊದಗಬಹುದಾದ ಕಷ್ಟಕಾರ್ಪಣ್ಯಗಳ ಬಗ್ಗೆ ಯೋಚಿಸುವುದು, ಹಾಗೂ ಅದೇ ಸಮಯದಲ್ಲಿ ತನ್ನ ಒಡಲಲ್ಲಿರುವ ಆತ್ಮನ ಪರಿಶುದ್ಧತೆ, ಪರಮಪರಂಜ್ಯೋತಿ ಸ್ವರೂಪವನ್ನು ಮನನಮಾಡುವುದು.-ಹೀಗೆ ಜೀವಾತ್ಮನು ಅನುಭವಿಸುತ್ತಿರಲು ವಿರಕ್ತಿ ತನ್ನಷ್ಟಕ್ಕೆ ತಾನೆ ಅವನಲ್ಲಿ ಒಡಮೂಡುವುದು. ವೈರಾಗ್ಯದಕಡೆ ಮನಸ್ಸು ಬಾಗಬೇಕಾದರೆ ಮೇಲೆ ಹೇಳಿದ ಚಿಂತನೆಗಳು ಬೇಕಲ್ಲವೇ !

ಮಿಕ್ಕ ಪರಿಗ್ರಹಗ್ರಹಿತನನ್ಯರಿನಾದುಪದೇಶ ಲೇಶಮಂ ।
ಲೆಕ್ಕಿಪನೇ ವಿರೋಧಿಗಳ ಬಲ್ಲನೆ ಮೆಲ್ಲಿರ್ದೆಯುಂಟೆ ಮತ್ತವಂ ॥
ನಕ್ಕುದು ನಕ್ಕುದೇ ಮುನಿದುದುಂ ಮುನಿಸೇ ಅವನಾಟವೆಲ್ಲವುಂ ।
ಮಕ್ಕಳ ಮೇಳದಾಟದವೊಲಿರ್ಪುದಲಾ ಅಪರಾಜಿತೇಶ್ವರಾ ! ||೩೬||

ಮಿಕ್ಕ ಪರಿಗ್ರಹ ಗ್ರಹಿತಂ ಅನ್ಯರಿಂ ಆದ ಉಪದೇಶ ಲೇಶಮಂ
ಲೆಕ್ಕಿಪನೇ, ವಿರೋಧಿಗಳ ಬಲ್ಲನೆ, ಮೆಲ್ಲಿರ್ದೆಯುಂಟೆ, ಮತ್ತೆ ಅವಂ
ನಕ್ಕುದು ನಕ್ಕುದೇ ಮುನಿದುದುಂ ಮುನಿಸೇ, ಅವನ ಆಟವೆಲ್ಲವುಂ
ಮಕ್ಕಳ ಮೇಳದಾಟದವೊಲ್ ಇರ್ಪುದಲಾ ಅಪರಾಜಿತೇಶ್ವರಾ !

ಮಿಕ್ಕ ಪರಿಗ್ರಹ ಗ್ರಹಿತಂ–ಹೆಚ್ಚು ಪರಿಗ್ರಹಗಳನ್ನು ಹೊಂದಿರುವವನು, ಅನ್ಯರಿಂ ಆದ–ಬೇರೆಯವರಿಂದ ಆದ, ಉಪದೇಶ ಲೇಶಮಂ–ಲೇಶಮಾತ್ರ ಉಪದೇಶವನ್ನು, ಲೆಕ್ಕಿಪನೇ–ಲಕ್ಷಿಸುತ್ತಾನೆಯೇ ?, ವಿರೋಧಿಗಳ ಬಲ್ಲನೆ–ಶತ್ರುಗಳಾರೆಂಬುದನ್ನು ತಿಳಿಯುವನೇ ?, ಮೆಲ್ಲಿರ್ದೆಯುಂಟೆ–ಮೃದುಹೃದಯವಿದೆಯೇ ?, ಮತ್ತೆ ಅವಂ–ಮತ್ತೆ ಆ ಮನುಷ್ಯನು, ನಕ್ಕುದು ನಕ್ಕುದೇ–ಸಂತೋಷಪಟ್ಟಿದ್ದು ಸಂತೋಷವೇ ?, ಮುನಿದುದುಂ ಮುನಿಸೇ–ಕೋಪಮಾಡಿಕೊಂಡಿದ್ದು ಕೋಪವೇ ?, ಅವನ ಆಟವೆಲ್ಲವುಂ–ಅವನ ಈ ಲೌಕಿಕ ವ್ಯಾಪಾರವೆಲ್ಲವೂ, ಮಕ್ಕಳ ಮೇಳದ ಆಟದವೊಲ್–ಮಕ್ಕಳ ಸಮೂಹದ ಆಟದಂತೆ, ಇರ್ಪುದಲಾ–ಇರುವುದಲ್ಲವೇ ? ಅಪರಾಜಿತೇಶ್ವರಾ !

ಪರಿಗ್ರಹಗಳನ್ನು ಅನಾವಶ್ಯವಾಗಿ ಹೆಚ್ಚಿಸಿಕೊಂಡು, ಆ ಪರಿಗ್ರಹ ಪಿಶಾಚಿಗಳ ಹಿಡಿತದಲ್ಲಿರುವವನು ಧರ್ಮಾತ್ಮರ ಸದ್ಧರ್ಮೋಪದೇಶಕ್ಕೆ ಕಿಂಚಿತ್ತಾದರೂ ಕಿವಿಗೊಡುವನೇ ? ತನ್ನ ಶತ್ರುಗಳಾರು ತನ್ನ ಹಿತರಕ್ಷಕರಾರು ಎಂಬ ವಿವೇಚನೆ ಇದೆಯೇ ? ನಡೆ ನುಡಿಗಳಲ್ಲಿ ಸ್ವಚ್ಛತೆ, ಮೃದುತ್ವ ಇರುತ್ತದೆಯೇ ? ಅಂತಹ ಕರ್ಮಿಯ ಭ್ರಾಂತಿಯುತವಾದ ಸಂತೋಷ ನಿಜವಾದ ಸಂತೋಷವೇ ? ಅವನ ಕೋಪ ತಾಪಗಳಿಗೆ ಬೆಲೆಯುಂಟೇ ? ಅಂತಹವನ ಈ ಮೂರು ದಿನದ ಲೌಕಿಕ ವ್ಯಾಪಾರವೆಲ್ಲ ಮಕ್ಕಳ ಗುಂಪಿನ ಆಟದಂತೆ ಇರುತ್ತದೆಯೇ ಹೊರತು ಅದಕ್ಕೆ ವಿಶೇಷ ಮಾನ್ಯತೆ ಕೊಡಬೇಕಾದುದಿಲ್ಲ.

ಗ್ರಹವೆಡೆಗೊಂಡವಂಗೆ ಮರವೊರ್ಮೆ ವಿವೇಕವದೊರ್ಮೆ ಕೂಡೆ ಸಂ ।
ಗ್ರಹಿಸುತಮಿರ್ಕುಮಲ್ಲದೆ ಯಥಾಸ್ಥಿತಿಯುಂಟೆ ನಿರಂತರಂ ಪರಿ–॥
ಗ್ರಹದೊಳಗಿರ್ದವಂಗೆ ನುಡಿಯುಂ ನಡೆಯುಂ ಕ್ಷಣಿಕಂಗಳಲ್ಲದೇ ।
ಸಹಜಚರಿತ್ರದೊಳ್ನಿರುಗೆ ಯೆತ್ತಣ ಮಾತಪರಾಜಿತೇಶ್ವರಾ ! ||೩೭||

ಗ್ರಹವು ಎಡೆಗೊಂಡವಂಗೆ ಮರವು ಒರ್ಮೆ, ವಿವೇಕವದು ಒರ್ಮೆ
ಕೂಡೆ ಸಂಗ್ರಹಿಸುತಂ ಇರ್ಕುಂ ಅಲ್ಲದೆ ಯಥಾಸ್ಥಿತಿಯುಂಟೆ,
ನಿರಂತರಂ ಪರಿಗ್ರಹದೊಳಗಿರ್ದವಂಗೆ ನುಡಿಯುಂ ನಡೆಯುಂ
ಕ್ಷಣಿಕಂಗಳಲ್ಲದೇ ಸಹಜ ಚರಿತ್ರದೊಳ್ ನಿರುಗೆ, ಯೆತ್ತಣಮಾತು ಅಪರಾಜಿತೇಶ್ವರಾ !

ಗ್ರಹವು ಎಡೆಗೊಂಡವಂಗೆ–ಗ್ರಹಹಿಡಿದವನಿಗೆ, ಮರವು ಒರ್ಮೆ–ಒಂದುಸಾರಿ ಮರವೆಯೂ; ಕೂಡೆ–ಆಗಲೆ, ವಿವೇಕವು ಅದು ಒರ್ಮೆ–ಇನ್ನೊಂಮ ಸಾರಿ ವಿವೇಕವೂ, ಸಂಗ್ರಹಿಸುತಂ ಇರ್ಕುಂ ಅಲ್ಲದೆ – ಉಂಟಾಗುತ್ತಿರುವುದಲ್ಲದೆ, ಯಥಾಸ್ಥಿತಿಯುಂಟೆ – ಒಂದೇರೀತಿಯಿರುತ್ತದೆಯೇ ?, ಹಾಗೆ, ನಿರಂತರಂ – ಯಾವಾಗಲೂ, ಪರಿಗ್ರಹದೊಳಗಿರ್ದವಂಗೆ – ಪರಿಗ್ರಹದಲ್ಲಿರುವವನಿಗೆ, ನುಡಿಯುಂ – ಮಾತೂ, ನಡೆಯುಂ–ನಡತೆಯೂ, ಕ್ಷಣಿಕಂಗಳಲ್ಲದೇ–ಕ್ಷಣಿಕವಾದವುಗಳದೆ, ಸಹಜಚರಿತ್ರದೊಳ್– ಸಹಜ ಆಚರಣೆಯಲ್ಲಿ, ನಿರುಗೆ – ವ್ಯವಸ್ಥಿತವಾಗಿರುವಿಕೆಯು, ಎತ್ತಣಮಾತು – ಎಲ್ಲಿಯಮಾತು; ಅಪರಾಜಿತೇಶ್ವರಾ !

ಗ್ರಹಹಿಡಿದ ಮನುಷ್ಯನಿಗೆ ಮನಸ್ಸು ಸ್ಥಿಮಿತಲ್ಲಿರುತ್ತದೆಯೇ ? ಒಂದುಕ್ಷಣ ಮರವೆಯೂ ಮತ್ತೊಂದು ಕ್ಷಣದಲ್ಲಿ ಅರಿವೂ ಉಂಟಾಗಿ, ಅವನ ಚಿತ್ತ ಡೋಲಾಯಮಾನವಾಗುವುದು. ಪರಿಗ್ರಹ ಪಿಶಾಚಿ ಹಿಡಿದ ಮನುಷ್ಯನ ರೀತಿಯು ಹೀಗೇನೆ. ಧನ, ಕನಕ, ವಸ್ತ್ರ, ವಾಹನಗಳ ಸಂಗ್ರಹದಲ್ಲಿ ತನ್ನ ಚಿತ್ತಸ್ವಾಸ್ಥ್ಯವನ್ನು ಕಳೆದುಕೊಂಡು ಮಾನವ ತನ್ನ ನಡೆ ನುಡಿಗಳಲ್ಲಿ ಏಕತೆಯಿಲ್ಲದೆ, ಚಾರಿತ್ರದಲ್ಲಿ ಪರಿಶುದ್ಧತೆಯಿಲ್ಲದೆ ಮನಶ್ಶಾಂತಿಯನ್ನು ಕಳೆದುಕೊಂಡು ಪರಿತಪಿಸುತ್ತಾನೆ. ತನ್ನ ಸಹಜಸ್ವಭಾವ ವನ್ನು ಮರೆತು ಕುರುಡನಂತೆ ತಟ್ಟಾಡುತ್ತಾನೆ. ಅವನ ನಡೆ ನುಡಿಗಳಲ್ಲಿ ಬರೇ ಕೃತ್ರಿಮತೆಯಿರುತ್ತದೆ. ಸಹಜತೆ ಮಾಯವಾಗುತ್ತದೆ. ಪರಿಗ್ರಹವೇ ಸಕಲ ದುರ್ಗುಣಗಳ ವೃಕ್ಷಕ್ಕೆ ಬೀಜ. ಈ ವಿಷಬೀಜ ವನ್ನು ಕಿತ್ತೊಗೆಯುವತನಕ ಪರಿಹಾರವಿಲ್ಲ.

ಸೊರ್ಕಿ ಶರೀರನಾರಿಧನವೆನ್ನವಿವೆಂದವರಲ್ಲಿ ಕಣ್ಮನಂ ।
ಸಿರ್ಕಿ ವಿವೇಕಿಗಳ್ನುಡಿದ ಧರ್ಮಮನೊಲ್ಲದೆ ಕೂಳ ಕೊರ್ಬಿನೊಳ್ ॥
ಕರ್ಕಶವೃತ್ತಿಯೊಳ್ನಡೆವ ಕಾಮುಕರಂತಕನೊಯ್ವ ಕಾಲದೊಳ್ ।
ಮರ್ಕಟನಂತೆ ಪಲ್ಗಿರಿವರೇತರ ಬಾಳಪರಾಜಿತೇಶ್ವರಾ ! ॥೩೮॥

ಸೊರ್ಕಿ ಶರೀರ ನಾರಿ ಧನವು ಎನ್ನವಿವು ಎಂದವರಲ್ಲಿ ಕಣ್ ಮನಂ
ಸಿರ್ಕಿ, ವಿವೇಕಿಗಳ್ ನುಡಿದ ಧರ್ಮಮಂ ಒಲ್ಲದೆ ಕೂಳಕೊರ್ಬಿನೊಳ್
ಕರ್ಕಶವೃತ್ತಿಯೊಳ್ ನಡೆವ ಕಾಮುಕರಂ, ಅಂತಕನ್ ಒಯ್ವ
ಕಾಲದೊಳ್ ಮರ್ಕಟನಂತೆ ಪಲ್ ಗಿರಿವರ್ ಏತರಬಾಳ್ ಅಪರಾಜಿತೇಶ್ವರಾ !

ಸೊರ್ಕಿ–ಸೊಕ್ಕಿ. ಶರೀರ ನಾರಿ ಧನವು–ಈ ಶರೀರ, ಸ್ತ್ರೀ, ಸಂಪತ್ತುಗಳು. ಎನ್ನವಿವು–ನನ್ನವು, ಎಂದವರಲ್ಲಿ–ಎಂದು ಅವುಗಳಲ್ಲೇ, ಕಣ್ ಮನಂ ಸಿರ್ಕಿ–ಕಣ್ಣು ಮನಸ್ಸುಗಳನ್ನು ನೆಟ್ಟು, ವಿವೇಕಿಗಳ್ ನುಡಿದ–ಜ್ಞಾನಿಗಳು ಹೇಳಿದ, ಧರ್ಮಮಂ ಒಲ್ಲದೆ–ಧರ್ಮವನ್ನು ಒಪ್ಪದೆ, ಕೂಳಕೊರ್ಬಿನೊಳ್–ಕ್ರೂರವಾದ ಮದಾಂಧತೆಯಿಂದಲೂ, ಕರ್ಕಶ ವೃತ್ತಿಯೊಳ್–ದುಷ್ಟ ಆಚರಣೆಯಲ್ಲಿಯೂ, ನಡೆವ–ವರ್ತಿಸುವ, ಕಾಮುಕರಂ–ವಿಷಯಾಸಕ್ತರನ್ನು, ಅಂತಕನ್ ಒಯ್ವ ಕಾಲದೊಳ್–ಯಮಧರ್ಮರಾಯನು ಕೊಂಡುಹೋಗುವ ಕಾಲದಲ್ಲಿ, ಮರ್ಕಟನಂತೆ–ಕಪಿಯಂತೆ, ಪಲ್‌ಗಿರಿವರ್–ಹಲ್ಲು ಗಿರಿಯುತ್ತಾರೆ! ಏತರಬಾಳ್–ಇದೇತರ ಜೀವನ ! ಅಪರಾಜಿತೇಶ್ವರಾ !

ಶರೀರ, ಹೆಣ್ಣು, ಹೊನ್ನು, ಮಣ್ಣು ಇವುಗಳೇ ನನ್ನ ಸರ್ವಸ್ವ ಎಂಬ ಮಮಕಾರದಿಂದ ಕೊಬ್ಬಿ ಅವುಗಳಲ್ಲೇ ಕಣ್ಮನಗಳನ್ನು ನೆಟ್ಟು ಧರ್ಮಾತ್ಮರ, ಸಾಧುಸಂತರ ವಿವೇಕಯುತವಾದ ಉಪದೇಶಕ್ಕೆ ಕಿವಿಗೊಡದೆ, ಕ್ರೂರಕರ್ಮಿಗಳು ಮದಾಂಧರಾಗಿರುತ್ತಾರೆ. ದುಷ್ಟ ಆಚರಣೆಗಳಿಂದ ಎಲ್ಲರನ್ನೂ ಅವಹೇಳನಮಾಡುತ್ತ ಧನಮದದಿಂದ ವಿಷಯಾಸಕ್ತರಾಗಿ ಸ್ವೇಚ್ಛಾಚಾರಿಗಳಾಗಿ ಜೀವಿಸುತ್ತಾರೆ. ಆದರೆ ಇವರ ಆಯುಷ್ಯ ಪೂರ್ಣವಾಗಿ ಯಮಧರ್ಮರಾಯನ ದರ್ಶನವಾದಾಗ ಭಯದಿಂದ, ಸಂಕಟದಿಂದ ಈ ಲೌಕಿಕ ಸುಖಲೋಲುಪತೆಯಿಂದ ಅಗಲಲಾರದೆ ಕೋತಿಯಂತೆ ಬಾಯಿಬಿಟ್ಟು ಹಲ್ಲುಕಿರಿಯುವರಲ್ಲಾ ! ಎಂಥ ಭಂಡಬಾಳು !

ರಚ್ಚೆಯ ಸಂಭ್ರಮಕ್ಕೆ ಕುಣಿದಿಚ್ಚೆಯ ಕೂಳುಣುತಂ ಕ್ಷಣಾಂತದೊಳ್ ।
ಕಿಚ್ಚಿನ ಕೊಂಡಮಂ ಪುಗುವ ರಂಡೆಯವೊಲ್ವಿಷಯಂಗಳಿಚ್ಚೆಯಂ ॥
ಮೆಚ್ಚಿ ಮನಕ್ಕೆ ಬಂದ ತೆರದೊಳ್ನಡೆದೊಲ್ಲದೆ ಸುವ್ರತಂಗಳಂ !
ಹುಚ್ಚರೊ ದುರ್ಗತಿಸ್ಥಳಕೆ ಬೀಳ್ವರದೇಕಪರಾಜಿತೇಶ್ವರಾ ! ॥೩೯॥

ರಚ್ಚೆಯ ಸಂಭ್ರಮಕ್ಕೆ ಕುಣಿದು, ಇಚ್ಚೆಯ ಕೂಳ್ ಉಣುತಂ,
ಕ್ಷಣಾಂತದೊಳ್ ಕಿಚ್ಚಿನ ಕೊಂಡಮಂ ಪುಗುವ ರಂಡೆಯವೊಲ್,
ವಿಷಯಂಗಳ ಇಚ್ಚೆಯಂ ಮೆಚ್ಚಿ, ಮನಕ್ಕೆ ಬಂದ ತೆರದೊಳ್ ನಡೆದು,
ಒಲ್ಲದೆ ಸುವ್ರತಂಗಳಂ, ಹುಚ್ಚರೊ ದುರ್ಗತಿಸ್ಥಳಕೆ ಬೀಳ್ವರ್ ಅದೇಕೆ ಅಪರಾಜಿತೇಶ್ವರಾ!

ರಚ್ಚೆಯ ಸಂಭ್ರಮಕ್ಕೆ ಕುಣಿದು–ಬಾಯಿಗೆ ಬಂದಂತೆ ಹರಟುವ ವಿಲಾಸಕ್ಕೆ ಕುಣಿದು, ಇಚ್ಚೆಯ ಕೂಳ್ ಉಣುತಂ–ಮನಸ್ಸಿಗೆ ಇಷ್ಟಬಂದ ಆಹಾರವನ್ನು ತಿನ್ನುತ್ತ, ಕ್ಷಣಾಂತದೊಳ್–ಮರುಕ್ಷಣದಲ್ಲಿ, ಕಿಚ್ಚಿನ ಕೊಂಡಮಂ–ಅಗ್ನಿಕುಂಡವನ್ನು, ಪುಗುವ–ಪ್ರವೇಶಿಸುವ, ರಂಡೆಯವೊಲ್–ವಿಧವೆಯಂತೆ, ವಿಷಯಂಗಳ ಇಚ್ಚೆಯಂ ಮೆಚ್ಚಿ–ಇಂದ್ರಿಯ ವಿಷಯಾಭಿಲಾಷೆಯನ್ನು ಮೆಚ್ಚಿ, ಮನಕ್ಕೆಬಂದ ತೆರದೊಳ್–ಮನಸ್ಸಿಗೆ ಬಂದ ರೀತಿಯಲ್ಲಿ, ನಡೆದು–ವರ್ತಿಸಿ, ಒಲ್ಲದೆ ಸುವ್ರತಂಗಳಂ–ಒಳ್ಳೆಯ ವ್ರತಗಳನ್ನು ಆಚರಿಸದೆ, ಅದೇಕೆ !, ದುರ್ಗತಿಸ್ಥಳಕೆ ಬೀಳ್ವರ್–ಅದೇಕೆ ! ಅಧೋಗತಿಗೆ ಬೀಳುತ್ತಾರೆ, ಹುಚ್ಚರೊ !–ಅವರು ಹುಚ್ಚರೋ ? ಅಪರಾಜಿತೇಶ್ವರಾ !

ಬಾಯಿಗೆಬಂದಂತೆ ಹರಟುತ್ತಾ, ವಿನಯ ಸಜ್ಜನಿಕೆಗಳನ್ನು ಬದಿಗೊತ್ತಿ ವಿಲಾಸಕ್ಕೆ ಮಣಿದು, ಕುಣಿದು ಕುಪ್ಪಳಿಸಿ, ನಾಲಿಗೆಗೆ ರುಚಿಕರವಾದ ಆಹಾರವನ್ನು ಭಕ್ಷ್ಯ ಅಭಕ್ಷ್ಯಗಳ ವಿವೇಚನೆಯಿಲ್ಲದೆ ಸವಿದುಂಡು, ಸ್ವೇಚ್ಛಾಚಾರಿಯಾಗಿ ತಿರುಗುತ್ತ, ಮರುಕ್ಷಣದಲ್ಲಿ ಕೆಂಡದ ರಾಶಿಯೊಳಗೆ ಬಿದ್ದು ಬೂದಿಯಾಗುವ ವಿಧವೆಯಂತೆ ಮನುಷ್ಯರು ಇಂದ್ರಿಯಾಸಕ್ತಿಗಳಿಗೆ ಪ್ರಾಧಾನ್ಯತೆ ಕೊಟ್ಟು ಮನಬಂದಂತೆ ನಡೆದು ಬಂದಾದರೂ ಒಳ್ಳೆಯ ವ್ರತವನ್ನು ಆಚರಿಸದೆ, ಅನ್ಯಾಯವಾಗಿ ಅಧೋಗತಿಗೆ ಬೀಳುತ್ತಾರಲ್ಲಾ, ಏನಿದು ಸೋಜಿಗ ! ಎಂಥಾ ಹುಚ್ಚರು ಅವರು. ಇವರಿಗಿಂತ ಅವಿವೇಕಿಗಳು ಮತ್ತೊಬ್ಬರಿಲ್ಲ.

ಪಿಂದಣ ಜನ್ಮಜನ್ಮದೊಳಗೆಲ್ಲಿದನೀ ಭವದತ್ತ ತನ್ನನಾ-।
ರ್ತಂದರದೆಲ್ಲಿ ಮುಂದೆ ತನಗಿನ್ನೆಡೆ ಪುಟ್ಟಿದ ತಾಣತಾಣದೊಳ್ ॥
ಕುಂದದುಪಾರ್ಜಿಸಿರ್ದ ಧನಮುಂ ತನುವಂ ಬರುತೊಂದನುಂ ಮನಂ ।
ತಂದುದೆ ನಿಮ್ಮನಚ್ಚಿರದೆ ಚಿಂತಿಪುದೇಕಪರಾಜಿತೇಶ್ವರಾ ! ॥೪೦॥

ಪಿಂದಣ ಜನ್ಮ ಜನ್ಮದೊಳಗೆ ಎಲ್ಲಿದನ್, ಈ ಭವದತ್ತ ತನ್ನಂ
ಆರ್ ತಂದರ್, ಅದೆಲ್ಲಿ ಮುಂದೆ ತನಗೆ ಇನ್ನೆಡೆ, ಪುಟ್ಟಿದ
ತಾಣ ತಾಣದೊಳ್ ಕುಂದದೆ ಉಪಾರ್ಜಿಸಿರ್ದ ಧನಮುಂ ತನುವಂ, ಬರುತ
ಒಂದನುಂ ಮನಂ ತಂದುದೇ, ನಿಮ್ಮ ನಚ್ಚಿರದೆ ಚಿಂತಿಪುದೇಕೆ ಅಪರಾಜಿತೇಶ್ವರಾ !

ಪಿಂದಣ-ಹಿಂದಿನ, ಜನ್ಮಜನ್ಮದೊಳಗೆ-ಜನ್ಮಜನ್ಮದಲ್ಲಿ, ಎಲ್ಲಿದನ್-ತಾನೆಲ್ಲಿದ್ದನು ?, ಈ ಭವ ದತ್ತ-ಈ ಭವದಕಡೆಗೆ, ತನ್ನಂ-ತನ್ನನ್ನು, ಆರ್‌ತಂದರ್-ಯಾರುತಂದರು ?, ಅದೆಲ್ಲಿ ಮುಂದೆ ತನಗೆ ಇನ್ನು ಎಡೆ-ಅದೆಲ್ಲಿ ಮುಂದೆ ತನಗೆ ಇನ್ನಾವ ಸ್ಥಳ ?, ಪುಟ್ಟಿದ-ಹುಟ್ಟಿದ, ತಾಣ ತಾಣದೊಳ್-ಪ್ರತಿ ಯೊಂದು ಸ್ಥಳದಲ್ಲಿಯೂ, ಕುಂದದೆ-ಹೆಚ್ಚಾಗಿ, ಉಪಾರ್ಜಿಸಿರ್ದ-ಸಂಪಾದಿಸಿದ, ಧನಮುಂ-ಸಂಪ ತ್ತನ್ನೂ, ತನುವಂ-ಶರೀರವನ್ನೂ, ಬರುತ-ಬರುವಾಗ, ಒಂದನುಂ-ಒಂದನ್ನಾದರೂ, ಮನಂ ತಂದುದೆ-ಮನಸ್ಸು ತಂದಿತೇ ? ನಿಮ್ಮ ನಚ್ಚಿರದೆ-ನಿಮ್ಮನ್ನು ನಂಬಿರದೆ, ಚಿಂತಿಪುದೇಕೆ-ಚಿಂತಿಸುವು ದೇಕೆ ? ಅಪರಾಜಿತೇಶ್ವರಾ !

ಅದೆಷ್ಟು ಭವಗಳನ್ನು ಈ ಜೀವ ಎತ್ತಿಲ್ಲ ! ಹಿಂದಿನ ಜನ್ಮಗಳಲ್ಲಿ ಎಲ್ಲೆಲ್ಲಿದ್ದೆನೋ ! ಯಾರಿಗೆ ಗೊತ್ತು ! ಈ ಭವದಕಡೆ ನನ್ನನ್ನು ಯಾರು ಕರೆತಂದರು. ಇಲ್ಲಿಂದ ಮುಂದೆ ನಾನಿನ್ನೆಲ್ಲಿಗೆ ಹೋಗು ವೆನು ? ನನ್ನ ಮುಂದಿನ ಸ್ಥಳ ಯಾವುದು ? ಈ ಎಲ್ಲಾ ವಿಷಯಗಳಲ್ಲಿ ಅಂಧಕಾರ ಕವಿದಿದೆ. ಹಿಂದೆ ಹುಟ್ಟಿದ ಸ್ಥಳಗಳಲ್ಲೆಲ್ಲಾ ಆಸೆಯಿಂದ ಮೋಹಕ್ಕೆ ವಶನಾಗಿ ಬೇಕಾದಷ್ಟು ದ್ರವ್ಯಸಂಪಾದನೆ ಮಾಡಿ ದ್ದೇನೆ. ಅನೇಕ ಶರೀರಗಳನ್ನು ಹೊಂದಿದ್ದೇನೆ. ಆದರೆ ಆ ಹಣದಲ್ಲಿ ಒಂದು ಕುರುಡು ಕಾಸನ್ನಾಗಲಿ ನಾನು ಈಗ ತಂದಿರುವೆನೆ ! ಅನೇಕ ಶರೀರಗಳ ಪೈಕಿ ಒಂದನ್ನಾದರೂ ನನ್ನ ಜೊತೆಯಲ್ಲಿ ತರಲು ಸಾಧ್ಯವಾಯಿತೆ ! ಇದೆಲ್ಲಾ ಎಷ್ಟು ಅಶಾಶ್ವತ ! ಎಷ್ಟು ಕ್ಷಣಭಂಗುರ ! ಭಗವಂತನನ್ನು ನಂಬದೆ, ಅವನಿಗೆ ಶರಣಾಗದೆ ಅವನಲ್ಲಿ ಭಕ್ತಿಯನ್ನಿಡದೆ ಚಿಂತಿಸಿದರೇನುಫಲ !

ಇತ್ತೊಡೆ ಬರ್ಪ್ಪುದೇ ಬಡತನಂ ಕುಡದಿರ್ದೊಡೆ ಲಕ್ಷ್ಮಿನಿಲ್ವುದೇ ।
ಸತ್ತೊಡೆ ಜೀವನಂತೆ ಲಯುವಾದನೆ ಜೀವಿಸುತಿರ್ದೊಡಿರ್ದನೇ ॥
ಎತ್ತಣ ಮಾತಿವೆಲ್ಲ ಬರುತಂ ಬಯಲಾಗುತವಿರ್ಪ್ಪುವೈಸೆ ನಿ–।
ಮ್ಮತ್ತಣ ಭಕ್ತಿಯೊಂದೆ ನಿಜಸಿದ್ಧಿಯಲಾ ಅಪರಾಜಿತೇಶ್ವರಾ ! ॥೪೧॥

ಇತ್ತೊಡೆ ಬರ್ಪ್ಪುದೇ ಬಡತನಂ, ಕುಡದಿರ್ದೊಡೆ ಲಕ್ಷ್ಮಿನಿಲ್ವುದೇ,
ಸತ್ತೊಡೆ ಜೀವನ್ ಅಂತೆ ಲಯವಾದನೆ, ಜೀವಿಸುತಿರ್ದೊಡೆ
ಇರ್ದನೇ, ಎತ್ತಣಮಾತಿವೆಲ್ಲ, ಬರುತಂ ಬಯಲಾಗುತಂ
ಇರ್ಪ್ಪವೈಸೆ, ನಿಮ್ಮತ್ತಣ ಭಕ್ತಿಯೊಂದೆ ನಿಜಸಿದ್ಧಿಯಲಾ ಅಪರಾಜಿತೇಶ್ವರಾ !

ಇತ್ತೊಡೆ–ದಾನಮಾಡಿದರೆ, ಬಡತನಂ ಬರ್ಪ್ಪುದೇ–ಬಡತನವು ಬರುವುದೇ ? ಕುಡದಿರ್ದೊಡೆ–ದಾನಮಾಡದಿದ್ದರೆ, ಲಕ್ಷ್ಮಿನಿಲ್ವುದೇ–ಸಂಪತ್ತು ನಿಲ್ಲುವುದೇ ?, ಸತ್ತೊಡೆ–ಸತ್ತರೆ, ಅಂತೆ–ಹಾಗೆಯೇ, ಜೀವನ್ – ಜೀವನು, ಲಯವಾದನೆ – ನಾಶವಾದನೇ ?, ಜೀವಿಸುತ ಇರ್ದೊಡಂ – ಬದುಕಿದ್ದರೆ, ಇರ್ದನೇ–ಜೀವನಿರುವನೇ ?, ಎತ್ತಣ ಮಾತು ಇವೆಲ್ಲ–ಇವೆಲ್ಲ ಎಲ್ಲಿಯಮಾತು ?, ಬರುತಂ–(ಬಡತನ, ಸಿರಿತನ, ಹುಟ್ಟು–ಸಾವು ಇವುಗಳು) ಬರುತ್ತಲೂ, ಬಯಲಾಗುತಂ–ನಾಶವಾಗುತ್ತಲೂ, ಇರ್ಪ್ಪವು ಐಸೆ–ಇರುತ್ತಲ್ಲವೇ ?, ನಿಮ್ಮತ್ತಣ–ನಿಮ್ಮಲ್ಲಿ ಮಾಡುವ, ಭಕ್ತಿಯೊಂದೆ–ಭಕ್ತಿಯೊಂದೇ, ನಿಜ ಸಿದ್ಧಿಯಲಾ–ಆತ್ಮಸಿದ್ಧಿಯನ್ನು ಮಾಡುವುದಲ್ಲವೇ ? ಅಪರಾಜಿತೇಶ್ವರಾ !

ದಾನಮಾಡುವುದಕ್ಕೇ ಧನವಿರುವುದು. ಹಾಗಲ್ಲದೆ ದಾನಮಾಡದೆ ಲೋಭಿಯಾದರೆ ಆ ಸಂಪತ್ತು ತನ್ನಲ್ಲಿ ಶಾಶ್ವತವಾಗಿ ಉಳಿಯುವುದೇನು ? ಧರ್ಮವಾತ್ಸಲ್ಯದಿಂದ ದಾನಮಾಡಿದರೆ ದಾರಿದ್ರ್ಯ ಬರುತ್ತದೆಯೇ ? ಸತ್ತರೆ ಜೀವನೂ ನಾಶವಾಗುವನೇ ? ಯಾವ ಜೀವಿಗೂ ಉಪಕಾರವಿಲ್ಲದೆ ಭೂಮಿಗೆ ಭಾರವಾಗಿ ಜೀವಿಸುತ್ತಿದ್ದರೆ ಅಂಥವನು ಬದುಕಿದ್ದರೂ ಸತ್ತಂತೆಯೇ ಸರಿ ! ಬದುಕುವುದಕ್ಕೋಸ್ಕರ ಸಾಯಬೇಕೆ ವಿನಃ ಸಾಯುವುದಕ್ಕೋಸ್ಕರ ಬದುಕಿರಬಾರದು. ಸಿರಿತನ–ಬಡತನ, ಜನನ–ಮರಣ, ಬರುತ್ತದೆ ಮರೆಯಾಗುತ್ತದೆ. ಇದಕ್ಕೆ ಪ್ರಾಮುಖ್ಯ ಕೊಡುವುದೇಕೆ ? ಭಗವಂತನ ಆರಾಧನೆ, ಜಿನೇಂದ್ರಭಕ್ತಿ ಇವುಗಳೇ ನಮ್ಮ ಜೀವನದ ಉಸಿರು, ಬಾಳಿನ ಗುರಿಯಾಗಿರಬೇಕು. ಸಿದ್ಧಭಕ್ತಿಯೊಂದೇ ನಮ್ಮ ಆತ್ಮಸಿದ್ಧಿಯನ್ನು ಮಾಡಬಲ್ಲದು.

ನಿನ್ನ ಪದಾಬ್ಜ ಭಕ್ತಿ ವಿಷಯಾರ್ಥವಿರಕ್ತಿ ತಪೋಭರಕ್ಕೆ ಸಂ–|
ಪನ್ನತೆವೆತ್ತ ಶಕ್ತಿ ತನುವಂ ಸಲೆ ಭೇದಿಸಿ ತನ್ನ ರೂಪಮ–||
ಚ್ಛಿನ್ನದೆ ಕಾಣ್ಬ ಯುಕ್ತಿ ಗುಣದಲ್ಲನುರಕ್ತಿ ಇವಾಗೆ ಮುಕ್ತಿ ಜೀ–|
ವಂ ನರನಾಗಿವಂ ಪಡೆಯದಿರ್ದೊಡದೇಕಪರಾಜಿತೇಶ್ವರಾ ! ||೪೨||

ನಿನ್ನಪದಾಬ್ಜ ಭಕ್ತಿ ವಿಷಯಾರ್ಥವಿರಕ್ತಿ ತಪೋಭರಕ್ಕೆ
ಸಂಪನ್ನತೆವೆತ್ತ ಶಕ್ತಿ, ತನುವಂ ಸಲೆ ಭೇದಿಸಿ ತನ್ನ ರೂಪಂ
ಅಚ್ಛಿನ್ನದೆ ಕಾಣ್ಬ ಯುಕ್ತಿ, ಗುಣದಲ್ಲಿ ಅನುರಕ್ತಿ, ಇವಾಗೆ ಮುಕ್ತಿ,
ಜೀವಂ ನರನಾಗಿ ಇವಂ ಪಡೆಯದಿರ್ದೊಡೆ ಅದೇಕೆ ಅಪರಾಜಿತೇಶ್ವರಾ !

ನಿನ್ನ ಪದಾಬ್ಜಭಕ್ತಿ–ನಿನ್ನ ಪಾದಕಮಲಗಳಲ್ಲಿ ಭಕ್ತಿ, ವಿಷಯ ಅರ್ಥ ವಿರಕ್ತಿ–ಭೋಗೋಪಭೋಗ ವಸ್ತುಗಳಲ್ಲಿ ವಿರಕ್ತಿ, ತಪೋಭರಕ್ಕೆ–ತಪಸ್ಸಿನ ತೀಕ್ಷ್ಣತೆಗೆ ಬೇಕಾದ, ಸಂಪನ್ನತೆವೆತ್ತ ಶಕ್ತಿ–ಸೌಜನ್ಯಯುತವಾದ ಶಕ್ತಿ, ತನುವಂ–ಶರೀರವನ್ನು, ಭೇದಿಸಿ–ಸುಜ್ಞಾನದ ಮೂಲಕ ಆತ್ಮನಿಂದ ಭಿನ್ನವೆಂದು ತಿಳಿದು, ತನ್ನರೂಪಂ–ತನ್ನ ಆತ್ಮಸ್ವರೂಪವನ್ನು, ಅಚ್ಛಿನ್ನದೆ–ಅಖಂಡವಾಗಿ (ಸಂಪೂರ್ಣವಾಗಿ), ಕಾಣ್ಬಯುಕ್ತಿ–ನೋಡುವ ಯುಕ್ತಿ, ಗುಣದಲ್ಲಿ ಅನುರಕ್ತಿ–ಸದ್ಗುಣಗಳಲ್ಲಿ ಪ್ರೀತಿ, ಇವಾಗೆ ಮುಕ್ತಿ–ಇವೆಲ್ಲ ಉಂಟಾದರೆ ಮುಕ್ತಿಯುಂಟಾಗುವುದು, ಜೀವಂ–ಜೀವನು, ನರನಾಗಿ–ಮನುಷ್ಯನಾಗಿ ಹುಟ್ಟಿ, ಇವಂ–ಇವುಗಳನ್ನು, ಪಡೆಯದಿರ್ದೊಡೆ–ಪಡೆಯದಿದ್ದರೆ, ಅದೇಕೆ–ಏನು ಪ್ರಯೋಜನ ? ಅಪರಾಜಿತೇಶ್ವರಾ !

ಮನುಷ್ಯಜನ್ಮ ದೊರಕುವುದು ಅತ್ಯಂತ ದುರ್ಲಭ. ಅಂಥಹ ಶ್ರೇಷ್ಠವಾದ ಜನ್ಮ ಸಿಕ್ಕಿರುವಾಗ ಅದರ ಸದುಪಯೋಗ ಪಡೆದುಕೊಂಡು ಆತ್ಮಕಲ್ಯಾಣ ಮಾಡಿಕೊಳ್ಳಬೇಕಾದುದು ಎಲ್ಲ ಮಾನವರ ಪರಮ ಕರ್ತವ್ಯ. ಹಾಗೆ ಮಾಡದಿದ್ದರೆ ಏನು ಪ್ರಯೋಜನ ? ಮನುಷ್ಯಜನ್ಮದಲ್ಲಿ ಜಿನಭಕ್ತಿಯನ್ನು ವೃದ್ಧಿಮಾಡಿಕೊಳ್ಳುವುದು, ವಿಷಯವಾಸನೆಗಳಲ್ಲಿ ವಿರಕ್ತಿಯನ್ನು ತಾಳಿ ವೈರಾಗ್ಯ ಭಾವನೆಯನ್ನು ಹೆಚ್ಚಿಸಿಕೊಳ್ಳುವುದು, ತಪಸ್ಸಿನ ಭಾರವನ್ನು ತಡೆದುಕೊಳ್ಳುವ ಮನೋಶಕ್ತಿಯನ್ನು ದೃಢಪಡಿಸಿಕೊಳ್ಳುವುದು; ಭೇದವಿಜ್ಞಾನದ ಮಹತ್ವವನ್ನರಿತು ತನ್ನ ಆತ್ಮ ಶರೀರದಿಂದ ಭಿನ್ನವೆಂದು ತಿಳಿದು, ಆ ಆತ್ಮನ ಸಂಪೂರ್ಣ ಸ್ವರೂಪವನ್ನು ನೋಡುವ ಸುಜ್ಞಾನವನ್ನು ಪಡೆದುಕೊಳ್ಳುವುದು,—ಸದ್ಗುಣಗಳಿಗೆ ಮಾರುಹೋಗುವುದು ಹಾಗೂ ಸದ್ಗುಣಿಗಳನ್ನು ಆದರಿಸುವುದು–ಈ ಕಾರ್ಯಗಳಿಂದ ನರನಾದವನು ತನ್ನ ಬಾಳನ್ನು ಸವೆಸಿದರೆ ಮುಕ್ತಿ ಕಟ್ಟಿಟ್ಟ ಗಂಟು !

ನಿನ್ನೊಳಗಾದ ಭಕ್ತಿಗಡ ನಿರ್ವೃತಿಬೇಕು ಗಡಂ ವಿಶುದ್ಧದಿಂ |
ತನ್ನಿರವುಂ ಭವತ್ಪ್ರತಿ ಗಡಾಂತುದು ದೀಕ್ಷೆಗಡಂ ಬಳಿಕ್ಕ ಹೋ ||
ಸನ್ನಿಗಡಂ ಬಿಸಿಲ್ಗಡ ಭಯಂಗಡ ಬಾಯ್ಸವಿಯಾಸೆಯುಂ ಗಡಂ |
ನನ್ನ ಮನೋವಿಕಾರತೆಯ ನಾಡುವೆನೇನಪರಾಜಿತೇಶ್ವರಾ ! ||೪೩||

ನಿನ್ನೊಳಗಾದ ಭಕ್ತಿಗಡ ನಿರ್ವೃತಿಬೇಕು ಗಡಂ, ವಿಶುದ್ಧದಿಂ
ತನ್ನಿರವುಂ ಭವತ್‌ಪ್ರತಿ ಗಡ ಆಂತುದು ದೀಕ್ಷೆಗಡಂ, ಬಳಿಕ್ಕ
ಅಹೋ ಸನ್ನಿಗಡಂ ಬಿಸಿಲ್‌ಗಡಂ ಬಾಯ್‌ಸವಿಯಾಸೆಯುಂ
ಗಡಂ, ನನ್ನ ಮನೋವಿಕಾರತೆಯಂ ಆಡುವೆನೇನ್ ಅಪರಾಜಿತೇಶ್ವರಾ !

ನಿನ್ನೊಳಗೆ ಆದ ಭಕ್ತಿಗಡ-ನಿನ್ನಲ್ಲಿ ಭಕ್ತಿಯುಂಟಾಯಿತಲ್ಲವೇ ? ನಿರ್ವೃತಿಬೇಕುಗಡಂ-ಮೋಕ್ಷವು ಬೇಕಲ್ಲವೇ ? ವಿಶುದ್ಧದಿಂ-ಪರಿಶುದ್ಧವಾಗಿ, ತನ್ನ ಇರವುಂ-ತನ್ನ ಇರುವಿಕೆಯು, ಭವತ್ ಪ್ರತಿಗಡ-ನಿನ್ನಲ್ಲಿಯಲ್ಲವೇ ? ಆಂತುದು ದೀಕ್ಷೆಗಡಂ-ತೆಗೆದುಕೊಂಡುದು ದೀಕ್ಷೆಯಲ್ಲವೇ ? ಬಳಿಕ್ಕ-ತರುವಾಯ, ಅಹೋ-ಅಯ್ಯೋ ! ಸನ್ನಿಗಡಂ – ಶೀತವಾಗುವುದಲ್ಲವೇ ? ಬಿಸಿಲ್‌ಗಡ – ಬಿಸಿಲಾಗುವುದಲ್ಲವೇ ? ಭಯಂಗಡ-ಭಯವಾಗುವುದಲ್ಲವೇ ? ಬಾಯ್‌ಸವಿಯಾಸೆಯುಂ ಗಡಂ-ಬಾಯಿಗೆ ರುಚಿಯಾಗಿ ತಿನ್ನುವ ಆಸೆಯಾಗುವುದಲ್ಲವೇ ? ನನ್ನ ಮನೋವಿಕಾರತೆಯಂ-ನನ್ನ ಮನೋವಿಕಾರವನ್ನು, ಆಡುವೆನ್ ಏನ್-ಏನು ಹೇಳಲಿ ! ಅಪರಾಜಿತೇಶ್ವರಾ !

ಜಿನೇಂದ್ರನಲ್ಲಿ ಭಕ್ತಿಯುಂಟಾಯಿತಲ್ಲವೇ ? ಅದರ ಜೊತೆಗೆ ಮೋಕ್ಷಸಾಮ್ರಾಜ್ಯವನ್ನು ಹೊಂದ ಬೇಕೆಂಬ ಹಂಬಲವುಂಟಾಯಿತಲ್ಲವೇ ? ಆತ್ಮಸಾಕ್ಷಾತ್ಕಾರಕ್ಕಾಗಿ ಚಡಪಡಿಸಲಿಲ್ಲವೇ ? ನನ್ನ ಸ್ಥಾನ ನಿನ್ನಂಥ ಪರಿಶುದ್ಧ ಆತ್ಮನು ಇರುವಂತ ಸ್ಥಳದಲ್ಲಿ ಅಲ್ಲವೇ ? ಇದನ್ನು ಸಾಧಿಸಲು ಆತುರಾತುರವಾಗಿ ದೀಕ್ಷೆಯನ್ನು ತೆಗೆದುಕೊಂಡಾಯಿತಲ್ಲವೇ ? ಪೂರ್ವಸಿದ್ಧತೆಯಿಲ್ಲದೆ ಈ ಆತುರ ಆತುರವಾಗಿ ನುಗ್ಗಿ ಕಣ್‌ಕಣ್ ಬಿಡುವಂತಾಗಿದೆ. ದೀಕ್ಷೆಗೊಂಡತರುವಾಯ ತಪಸ್ಸಿನ ತಾಪಕ್ಕೆ ತಾಳಲಾರದೆ ಅಯ್ಯೋ ! ಚಳಿ, ಶೀತ, ಭಯ, ಎಂದು ಬೊಬ್ಬೆಹಾಕುತ್ತ, ಇಂದ್ರಿಯಗಳಮೇಲೆ ಪ್ರಭುತ್ವವಿಲ್ಲದೆ, ಮನೋವಿಕಾರ ದಿಂದ ತತ್ತರಿಸುತ್ತಿರುವೆನು. ನನ್ನ ಈ ವಿಚಲತೆಗೆ ಏನು ಹೇಳಲಿ !

ನಾಲಗೆಗಾವುದಿಚ್ಛೆ ತವ ನಾಮರಸಾಯನವೊಂದೆ ನನ್ನ ಚಿ– ।
ತ್ತಾಲಯದೊಳ್ಬೆಳರ್ಪ ಮಣಿದೀಪಮದಾವುದು ನಿನ್ನರೂಪೆ ಪೊ–॥
ಯ್ಮಾಲೆಯ ಮೆಯ್ಯ ಭಾರಣೆಯ ಹಿಂಗಿಸುವೌಷಧಿಯಾವುದೆನ್ನ ಚಿ–।
ತ್ಪಾಲಕ ನಿನ್ನ ಮಾರ್ಗದ ತಪಂಗಳಲಾ ಅಪರಾಜಿತೇಶ್ವರಾ ! ॥೪೪॥

ನಾಲಗೆಗೆ ಆವುದಿಚ್ಛೆ ತವನಾಮ ರಸಾಯನ ಒಂದೆ, ನನ್ನ
ಚಿತ್ತಾಲಯದೊಳ್ ಬೆಳರ್ಪ ಮಣಿದೀಪಂ ಅದಾವುದು ನಿನ್ನರೂಪೆ,
ಪೊಯ್‌ಮಾಲೆಯ ಮೆಯ್ಯ ಭಾರಣೆಯ ಹಿಂಗಿಸುವ ಔಷಧಿ
ಯಾವುದು, ಎನ್ನ ಚಿತ್‌ಪಾಲಕ, ನಿನ್ನ ಮಾರ್ಗದ ತಪಂಗಳಲಾ ಅಪರಾಜಿತೇಶ್ವರಾ !

ನಾಲಗೆಗೆ ಆವುದು ಇಚ್ಛೆ–ನಾಲಗೆಗೆ ಯಾವುದು ಇಷ್ಟ ? ತವ–ನಿಮ್ಮ, ನಾಮ ರಸಾಯನಂ ಒಂದೆ–ಹೆಸರೆಂಬ ರಸಾಯನವೊಂದೆ ! ನನ್ನ ಚಿತ್ತಾಲಯದೊಳ್-ನನ್ನ ಮನಸ್ಸೆಂಬ ಮನೆಯಲ್ಲಿ, ಬೆಳರ್ಪ–ಪ್ರಕಾಶಿಸುವ, ಮಣಿದೀಪಂ ಅದಾವುದು–ರತ್ನದೀಪವಾವುದು ? ನಿನ್ನರೂಪೆ–ನಿನ್ನರೂಪವೇ ! ಪೊಯ್‌ಮಾಲೆಯ–ಅನುಸರಿಸಿ ಬಂದಿರುವ ಭವಮಾಲೆಯ, ಮೆಯ್ಯ ಭಾರಣೆಯ–ಶರೀರದ ಭಾರವನ್ನು, ಹಿಂಗಿಸುವ–ಹೋಗಲಾಡಿಸುವ, ಔಷಧಿಯಾವುದು–ಔಷಧಿಯಾವುದು ? ಎನ್ನ ಚಿತ್ಪಾಲಕ–ನನ್ನ ಆತ್ಮ ರಕ್ಷಕನೇ ! ನಿನ್ನಮಾರ್ಗದ–ನೀನು ತೋರಿರುವ ಮಾರ್ಗದ, ತಪಂಗಳಲಾ–ತಪಸ್ಸುಗಳಲ್ಲವೇ ? ಅಪರಾಜಿತೇಶ್ವರಾ !

ಭಗವಂತನ ನಾಮಸ್ಮರಣೆಯೊಂದೇ ನನ್ನ ನಾಲಿಗೆಗೆ ರಸಾಯನದಷ್ಟು ಇಷ್ಟ. ನನ್ನ ಮನಸ್ಸಿನಲ್ಲಿ ಸದಾಕಾಲ ಬೆಳಗುತ್ತಿರುವ ಸುಜ್ಞಾನವೆಂಬ ರತ್ನದೀಪದ ಪ್ರಭೆ ಯಾವುದೆಂದರೆ ನಿನ್ನ ಸ್ವರೂಪವೇ ! ಭವ ಭವಗಳಿಂದ ಎಡೆಬಿಡದೆ ಹಿಂಬಾಲಿಸುತ್ತಿರುವ ಈ ಶರೀರದ ಭಾರವನ್ನು ಹೋಗಲಾಡಿಸುವ ಔಷಧಿಯಾವುದೆಂದರೆ ಆ ಭಗವಂತನು ತೋರಿದ ದಾರಿಯಲ್ಲಿ ನಡೆದು ಕರ್ಮನಿರ್ಜರೆ ಮಾಡಿಕೊಳ್ಳುವುದು. ನನ್ನ ಆತ್ಮೋದ್ಧಾರಕ್ಕೆ ಆ ಪರಮಾತ್ಮನಿಗೊಬ್ಬನಿಗೆ ಮಾತ್ರ ಶರಣಾಗಬೇಕು. ಅವನೇ ನನ್ನ ಆತ್ಮರಕ್ಷಕ.

ತೊಗಲ ಪಸುಂಬೆಯೊಳ್ಪೊಲಸಿನೋವರಿಯೊಳ್ರುಜೆಯೆಂಬ ಚೇಳ್ಗಳಾ–।
ಪಗವಿನೊಳಿರ್ಪವೊಲ್ತನುವಿನೊಳ್ಕವಿದಿರ್ದಪನಾತ್ಮನೆಂಬುದಂ ॥
ಬಗೆಯದ ಕಾರಣಂ ಬರ್ದುಕು ರಂಜಿಸಿತಲ್ಲದೆ ತೂಗಿ ನೋಳ್ಪೊಡಂ ।
ನಗಲೆಡೆಯುಂಟೆ ತುತ್ತಿಡೆ ಮನಂಬಹುದೇ ಅಪರಾಜಿತೇಶ್ವರಾ ! ॥೪೫॥

ತೊಗಲ ಪಸುಂಬೆಯೊಳ್ ಪೊಲಸಿನ ಓವರಿಯೊಳ್, ರುಜೆಯೆಂಬ
ಚೇಳ್ಗಳ್ ಆ ಪಗವಿನೊಳ್ ಇರ್ಪವೊಲ್, ತನುವಿನೊಳ್
ಕವಿದಿರ್ದಪನ್ ಆತ್ಮನ್ ಎಂಬುದಂ ಬಗೆಯದ ಕಾರಣಂ ಬರ್ದುಕು ರಂಜಿಸಿತಲ್ಲದೆ,
ತೂಗಿ ನೋಳ್ಪೊಡಂ ನಗಲ್ ಎಡೆಯುಂಟೆ, ತುತ್ತಿಡೆ ಮನಂಬಹುದೇ ಅಪರಾಜಿತೇಶ್ವರಾ !

"ತೊಗಲ ಪಸುಂಬೆಯೊಳ್–ಚರ್ಮದ ಚೀಲದಲ್ಲಿಯೂ, ಪೊಲಸಿನ–ಹೊಲಸಿನ, ಓವರಿಯೊಳ್–ಕೋಣೆಯಲ್ಲಿಯೂ, ರುಜೆಯೆಂಬ ಚೇಳ್ಗಳ್–ರೋಗವೆಂಬ ಚೇಳುಗಳ, ಆ ಪಗವಿನೊಳ್–ಆ ಕುಳಿಯಲ್ಲಿಯೂ, ಇರ್ಪವೊಲ್–ಇರುವಂತೆ. ಆತ್ಮನ್–ಆತ್ಮನು, ತನುವಿನೊಳ್–ಶರೀರದಲ್ಲಿ, ಕವಿದಿರ್ದಪನ್–ಆವರಿಸಿಕೊಂಡಿರುವನು", ಎಂಬುದಂ–ಎಂಬುದನ್ನು, ಬಗೆಯದ ಕಾರಣಂ–ವಿಚಾರ ಮಾಡದಿರುವುದರಿಂದ, ಬರ್ದುಕು–ಬಾಳು, ರಂಜಿಸಿತಲ್ಲದೆ–ಶೋಭಿಸಿತಲ್ಲದೆ, ತೂಗಿನೋಳ್ಪೊಡಂ–ಆಳವಾಗಿ ವಿಚಾರಮಾಡಿದರೆ, ನಗಲ್ ಎಡೆಯುಂಟೆ–ನಗುವುದಕ್ಕೆ ಅವಕಾಶವಿದೆಯೇ ? ತುತ್ತಿಡೆ–ತುತ್ತನ್ನಿಡುವುದಕ್ಕೆ, ಮನಂಬಹುದೆ–ಮನಸ್ಸು ಬರುವುದೇ ? ಅಪರಾಜಿತೇಶ್ವರಾ !

ಕರ್ಮಕ್ಕೆ ವಶನಾಗಿ ಆತ್ಮನು ಈ ಶರೀರವೆಂಬ ಚರ್ಮದ ಚೀಲದಲ್ಲಿಯೂ, ಹೊಲಸಿನ ಕೋಣೆಯಲ್ಲಿಯೂ, ರೋಗವೆಂಬ ಚೇಳುಗಳ ಹಗೇವಿನಲ್ಲಿಯೂ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿರುವನು. ಇದನ್ನು ತಿಳಿದುಕೊಂಡರೆ ಮಾನವ ತನ್ನ ಆತ್ಮಸ್ವಾತಂತ್ರ್ಯಕ್ಕೆ ಪ್ರಯತ್ನಪಡುತ್ತಾನೆ. ಆದರೆ ಎಷ್ಟು ಜನ ವಿವೇಕಶಾಲಿಗಳಾಗಿದ್ದಾರೆ ? ಆತ್ಮನು ಭವಭವಾಂತರಗಳಿಂದ ಹೀಗೆ ಅನೇಕ ಶರೀರಗಳಲ್ಲಿ ಬಂದು ದುಃಖವನ್ನು ಅನುಭವಿಸುತ್ತಿದ್ದಾನೆ ಎಂಬುದನ್ನು ಮನಗಾಣದಿರುವುದರಿಂದ, ಈ ಲೌಕಿಕ ಬದುಕು ಶೋಭಾಯಮಾನವಾಗಿ ಕಾಣುತ್ತದೆ. ಆದರೆ ಈ ಶೋಭೆ ಶಾಶ್ವತವೇ ? ಸ್ವಲ್ಪ ಆಳವಾಗಿ ವಿಚಾರ ಮಾಡಿದರೆ ಈ ವೈಭವದ ಅಶಾಶ್ವತೆ ಮನದಟ್ಟಾಗುತ್ತದೆ. ಆಗ ತನ್ನ ದುಃಸ್ಥಿತಿಯು ಅರಿವಾಗಿ, ನಗುವುದಿರಲಿ, ಬಾಯಿಗೆ ತುತ್ತನೆತ್ತುವುದಕ್ಕೂ ಮನಬಾರದಾಗುತ್ತೆ. ಈ ಜೀವನದಲ್ಲಿ ಅಷ್ಟೊಂದು ಜುಗುಪ್ಸೆ, ಅಸಹ್ಯ ಮನದೋರುತ್ತದೆ.

ಮಾಸು ಮುಸುಂಕಿ ತಾಯೊಡಲೊಳೆಂತಿರವರ್ಪುದು ಮೂತ್ರಮಾರ್ಗದೊಳ್ ।
ಹೇಸದೆ ಬರ್ಪುದೆಂತು ಮೊರದೊಳ್ಮಲಮೂತ್ರದೊಳಾಳುತೇಳುತಂ ॥
ಕೂಸೆನಿಸಿರ್ಪುದೆಂತುಟದನಾಂ ಮರೆದಾಗಳೆ ಠಕ್ಕು ಜವ್ವನಂ ।
ಸಾಸದವೆಂದು ನಚ್ಚಿದೆನಲಾ ಮತಿದೋರಪರಾಜಿತೇಶ್ವರಾ ॥೪೬॥

ಮಾಸು ಮುಸುಂಕಿ ತಾಯೊಡಲೊಳ್ ಎಂತು ಇರವರ್ಪುದು,
ಮೂತ್ರಮಾರ್ಗದೊಳ್ ಹೇಸದೆ ಬರ್ಪುದೆಂತು, ಮೊರದೊಳ್ ಮಲ
ಮೂತ್ರದೊಳ್ ಆಳುತ ಏಳುತಂ ಕೂಸು ಎನಿಸಿರ್ಪುದು ಎಂತುಟು, ಅದನ್ ಆಂ
ಮರೆದಾಗಳೆ ಠಕ್ಕು ಜವ್ವನಂ ಸಾಸದವೆಂದು ನಚ್ಚಿದೆನಲಾ ಮತಿದೋರ ಅಪರಾಜಿತೇಶ್ವರಾ!

ಮಾಸು–ಗರ್ಭದ ಚೀಲವು, ಮುಸುಂಕಿ–ಆವರಿಸಿಕೊಂಡು, ತಾಯ ಒಡಲೊಳ್–ತಾಯಿಯ ಹೊಟ್ಟೆಯಲ್ಲಿ, ಎಂತು ಇರವರ್ಪುದು–ಹೇಗೆ ಇರುವುದಕ್ಕಾಗುವುದು? ಮೂತ್ರ ಮಾರ್ಗದೊಳ್–ಮೂತ್ರದ್ವಾರದಲ್ಲಿ, ಹೇಸದೆ–ಅಸಹ್ಯವಿಲ್ಲದೆ, ಬರ್ಪುದೆಂತು–ಬರುವುದು ಹೇಗೆ? ಮೊರದೊಳ್–ಮೊರದಲ್ಲಿ, ಮಲಮೂತ್ರದೊಳ್–ಮಲಮೂತ್ರದಲ್ಲಿ, ಆಳುತ–ಮುಳುಗುತ್ತ, ಏಳುತಂ–ಏಳುತ್ತ, ಕೂಸು ಎನಿಸಿರ್ಪುದು ಎಂತುಟು–ಮಗುವೆನಿಸುವುದು ಹೇಗೆ? ಅದನ್ ಆಂ ಮರೆದಾಗಳೆ–ಅದನ್ನು ನಾನು ಮರೆತಾಗಲೇ. ಠಕ್ಕು ಜವ್ವನಂ–ಈ ಸುಳ್ಳು ಯೌವನವು, ಸಾಸದವೆಂದು–ಸ್ಥಿರವಾದುದೆಂದು. ನಚ್ಚಿದೆನಲಾ–ನಂಬಿದೆನಲ್ಲಾ! ಮತಿದೋರ–ಬುದ್ಧಿಯನ್ನು ತೋರಿಸು! ಅಪರಾಜಿತೇಶ್ವರಾ!

ಈ ಜೀವ ಗರ್ಭಕ್ಕೆ ಅವತರಿಸಿ ತಾಯಿಯ ರಕ್ತ ಮಾಂಸದಿಂದೊಡಗೂಡಿದ ಗರ್ಭಚೀಲದಲ್ಲಿ ಅಡಗಿ ಹೇಗೆ ಇರುತ್ತಾನೋ! ಜನನವಾಗುವಾಗ ಮೂತ್ರದ್ವಾರದಲ್ಲಿ ಸ್ವಲ್ಪವೂ ಹೇಸದೆ, ಅಸಹ್ಯ ಪಡದೆ ಬರುವುದಾದರೂ ಹೇಗೆ! ಜನನವಾದಮೇಲೆ ಕೂಸನ್ನು ಮೊರದಲ್ಲಿ ಮಲಗಿಸುತ್ತಾರೆ. ಆ ಅವಸ್ಥೆಯಲ್ಲಿ ಮಲ ಮೂತ್ರಗಳಲ್ಲಿ ಹೊರಳಾಡಿ, ಮೈಯಿಗೆಲ್ಲ ರುಬ್ಬಿಕೊಂಡು ಹೊಲಸಾಗಿರುತ್ತಾನೆ. ಈ ದುಃಖದಿಂದ ಕೂಡಿದ ಹೊಲಸು ವಿಚಾರಗಳನ್ನು ಮರೆತದ್ದರಿಂದಲೇ ಈಗಿನ ಈ ನಿಜವಲ್ಲದ ಯೌವ್ವನವನ್ನು ಶಾಶ್ವತವೆಂದು ನಂಬಿ ಮೋಸಹೋಗಿರುವೆನಲ್ಲಾ! ಅಯ್ಯೋ ದೇವರೆ, ನಿಜವಾದ ಮಾರ್ಗವನ್ನು ತೋರು!

ಪಗೆಯ ವಶಕ್ಕೆ ಸಿಲ್ಕಿ ಸೆರೆಯಿರ್ದ ಮಹಾನುಭವಂಗೆ ನಿದ್ರೆ ತಾ–|
ನೊಗೆವುದೊ ಭೋಗದಿಚ್ಛೆಯೆ ವಿಡಾಯುವೆ ಮಚ್ಚರವುಂಟೆ ದಿವ್ಯಯೋ–||
ಗಿಗೆ ರಿಪುಮೋಹಮಂ ಜಯಿಸಿ ಮೆಯ್ಸೆರೆಯಂ ಕಳೆವಂದು ಜೋಕೆಯು–|
ಜ್ಜುಗವದೆ ಚಿಂತೆಯೈಸೆ ಪೆರತೊಂದಿಹುದೇ ಅಪರಾಜಿತೇಶ್ವರಾ ! ||೪೭||

ಪಗೆಯ ವಶಕ್ಕೆ ಸಿಲ್ಕಿ ಸೆರೆಯಿರ್ದ ಮಹಾನುಭವಂಗೆ ನಿದ್ರೆ ತಾಂ ಒಗೆವುದೊ,
ಭೋಗದ ಇಚ್ಛೆಯೆ ವಿಡಾಯವೆ, ಮಚ್ಚರವುಂಟೆ ದಿವ್ಯಯೋಗಿಗೆ,
ರಿಪುಮೋಹಮಂ ಜಯಿಸಿ ಮೆಯ್ ಸೆರೆಯಂ ಕಳೆವಂದು,
ಜೋಕೆಯ ಉಜ್ಜುಗವು ಅದೆ ಚಿಂತೆಯೈಸೆ, ಪೆರತೊಂದಿಹುದೇ ಅಪರಾಜಿತೇಶ್ವರಾ !

ಪಗೆಯವಶಕ್ಕೆ ಸಿಲ್ಕಿ–ಶತ್ರುವಿನ ವಶಕ್ಕೆ ಸಿಕ್ಕಿ, ಸೆರೆಯಿರ್ದ–ಸೆರೆಯಲ್ಲಿರುವ, ಮಹಾನುಭವಂಗೆ–ಮಹಾನುಭಾವನಿಗೆ, ನಿದ್ರೆತಾಂ ಒಗೆವುದೊ–ನಿದ್ರೆ ತಾನುಂಟಾಗುವುದೋ ? ರಿಪುಮೋಹಮಂ–ಶತ್ರುವಾದ ಮೋಹವನ್ನು, ಜಯಿಸಿ–ಗೆದ್ದು, ಮೆಯ್‌ಸೆರೆಯಂ–ಶರೀರದ ಬಂಧನವನ್ನು, ಕಳೆವಂದು–ಕಳೆಯುವಾಗ, ದಿವ್ಯಯೋಗಿಗೆ–ಶ್ರೇಷ್ಠನಾದ ಯೋಗಿಗೆ, ಭೋಗದ ಇಚ್ಛೆಯೆ–ಭೋಗದ ಇಚ್ಛೆಯುಂಟಾಗುವುದೇ ? ವಿಡಾಯವೆ–ಆಡಂಬರವೇ ? ಮಚ್ಚರಂ ಉಂಟೆ–ಮಾತ್ಸರ್ಯವುಂಟೆ ? ಜೋಕೆಯ–ಜಾಗರೂಕತೆಯು, ಉಜ್ಜುಗವು–ಪ್ರಯತ್ನವು, ಅದೆ ಚಿಂತೆಯೈಸೆ–ಅದೊಂದೆ ಚಿಂತೆತಾನೆ, ಪೆರತೊಂದು-ಇಹುದೇ–ಬೇರೊಂದು ಯೋಚನೆಯಿದೆಯೇ ? ಅಪರಾಜಿತೇಶ್ವರಾ !

ಶತ್ರುವಿನ ಕೈಗೆ ಸೆರೆಸಿಕ್ಕ ಮಹಾನುಭಾವನಿಗೆ ನಿದ್ರೆ ಬರುತ್ತದೆಯೇ ? ಅವನು ಸಮಾಧಾನದಿಂದಿರಲು ಸಾಧ್ಯವೇ? ಇದೇ ರೀತಿ, ಮೋಹವೆಂಬ ಕರ್ಮರಾಕ್ಷಸನನ್ನು ಗೆದ್ದು ಜನನ ಮರಣಗಳ ಸಂಕೋಲೆಯಿಂದ ತಪ್ಪಿಸಿಕೊಳ್ಳಬೇಕೆಂಬ ಹವಣಿಕೆಯಲ್ಲಿರುವ ದಿವ್ಯಯೋಗಿಗೆ ಭೋಗದ ಇಚ್ಛೆಯುಂಟಾಗುವುದೇ? ಲೌಕಿಕ ಸುಖಗಳಿಗೆ ಅಂತಹ ಮಹಾತಪಸ್ವಿಯು ಹಾತೊರೆಯುತ್ತಾನೆಯೇ ? ಆಡಂಬರಗಳಿಗೆ, ದೊಡ್ಡಸ್ತಿಕೆಗೆ ಮನ ಒಲಿಯುತ್ತಾನೆಯೇ ? ಅವನಲ್ಲಿ ಮಾತ್ಸರ್ಯದ ಕಷಾಯಕ್ಕೆ ಜಾಗವಿದೆಯೇ ? ಖಂಡಿತಾ ಇರುವುದಿಲ್ಲ. ಜಾಗರೂಕತೆಯಿಂದ ತನ್ನ ಪ್ರಯತ್ನವನ್ನು ಮುಂದುವರಿಸಬೇಕೆಂಬುದೊಂದೇ ಒಂದು ಚಿಂತೆ ಆ ದಿವ್ಯ ಯೋಗಿಯನ್ನು ಕಾಡುತ್ತಿರುವುದೇ ಹೊರತು ಮಿಕ್ಕ ಯಾವ ಚಿಂತನೆಗಳಿಗೂ ಅವಕಾಶವೇ ಇರುವುದಿಲ್ಲ.

ಓದುವ ಪೇಳ್ವ ಕೇಳ್ವ ಪರಿಭಾವಿಪ ಬಲ್ಲನಿತಂ ಪೆರರ್ಗೆ ತಾ-|
ನೋದಿಪ ಮೂರು ಸಂಜೆಗಳನಾರು ಸುಪರ್ವದಿನಂಗಳಂ ಸದಾ ||
ಸಾಧಿಸಿ ತಕ್ಕತತ್ಕ್ರಿಯೆಗಳಂ ನೆಗಳ್ದಿಂತುಟು ದಂದುಗಂಗಳಿಂ |
ಪೋದೊಡೆ ಕಾಲಮೆಲ್ಲ ಶುಭಕಾಲವಲಾ ಅಪರಾಜಿತೇಶ್ವರಾ ! ||೧೮||

ಓದುವ ಪೇಳ್ವ ಕೇಳ್ವ ಪರಿಭಾವಿಪ ಬಲ್ಲ ಅನಿತಂ ಪೆರರ್ಗೆ
ತಾನ್ ಓದಿಪ, ಮೂರು ಸಂಜೆಗಳಂ ಆರು ಸುಪರ್ವದಿನಂಗಳಂ
ಸದಾ ಸಾಧಿಸಿ ತಕ್ಕ ತತ್ ಕ್ರಿಯೆಗಳಂ ನೆಗಳ್ದು, ಇಂತುಟು
ದಂದುಗಂಗಳಿಂ ಪೋದೊಡೆ, ಕಾಲಮೆಲ್ಲ ಶುಭಕಾಲವಲಾ ಅಪರಾಜಿತೇಶ್ವರಾ !

ಓದುವ ಪೇಳ್ವ ಕೇಳ್ವ-ಓದುವ, ಬೇರೆಯವರಿಗೆ ಹೇಳುವ, ತಾನು ಕೇಳುವ, ಪರಿಭಾವಿಪ-ವಿಚಾರಮಾಡುವ, ಬಲ್ಲ ಅನಿತಂ-ತನಗೆ ತಿಳಿದಿರುವಷ್ಟನ್ನೂ, ಪೆರರ್ಗೆ ತಾನ್ ಓದಿಪ-ಬೇರೆಯವರಿಗೆ ತಾನು ಓದಿಹೇಳುವ, ಮೂರು ಸಂಜೆಗಳಂ-ಮೂರು ಸಂಧ್ಯಾ ಸಮಯಗಳನ್ನೂ, (ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲ), ಆರು ಸುಪರ್ವ ದಿನಂಗಳಂ-ಎರಡು ಪಂಚಮಿ, ಎರಡು ಅಷ್ಟಮಿ, ಎರಡು ಚತುರ್ದಶಿಗಳೆಂಬ ಆರು ಪರ್ವದಿನಗಳನ್ನೂ, ಸದಾ ಸಾಧಿಸಿ-ಯಾವಾಗಲೂ ಸಾಧಿಸಿ, ತಕ್ಕ-ಯೋಗ್ಯವಾದ, ತತ್ ಕ್ರಿಯೆಗಳಂ-ಆಯಾ ಕಾರ್ಯಗಳನ್ನು, ನೆಗಳ್ದು-ನಡೆಸುವ, ಇಂತುಟು-ಈ ರೀತಿಯಾದ, ದಂದುಗಂಗಳಿಂ-ಕಾಯಕ್ಲೇಷಸಹಿತವಾದ ಕಾರ್ಯಗಳಲ್ಲಿ, ಕಾಲಮೆಲ್ಲ ಪೋದೊಡೆ-ಕಾಲವನ್ನು ಕಳೆದರೆ, ಅದೆಲ್ಲ, ಶುಭಕಾಲವಲಾ-ಶುಭಕಾಲವಲ್ಲವೇ ? ಅಪರಾಜಿತೇಶ್ವರಾ !

ನಮ್ಮ ಜೀವಿತ ಸಮಯವನ್ನು ಯಾವಾಗಲೂ ಧರ್ಮಧ್ಯಾನದಲ್ಲಿ ಕಳೆಯಬೇಕು. ಶುಭ ಪರಿಣಾಮಿಗಳಾಗಿರಬೇಕು. ಆಗಲೇ ಜನ್ಮ ಸಾರ್ಥಕವಾದೀತು. ಶಾಸ್ತ್ರಾಧ್ಯಯನವನ್ನು ಸ್ವತಃ ಮಾಡುವುದು, ಬೇರೆಯವರಿಗೆ ಈ ಶಾಸ್ತ್ರದಲ್ಲಿರುವ ಸಾರವನ್ನು ತಿಳಿಯಹೇಳುವುದು, ಬೇರೆ ವಿದ್ವಾಂಸಗಿಂದ ಹೆಚ್ಚಿನ ಧರ್ಮವಿಚಾರವನ್ನು ತಿಳಿದುಕೊಳ್ಳುವುದು ಇವುಗಳಿಂದ ಸುಜ್ಞಾನ ವೃದ್ಧಿಯಾಗುವುದು. ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ಈ ತ್ರಿಸಂಧ್ಯಾ ಸಮಯಗಳಲ್ಲಿ ಪಂಚನಮಸ್ಕಾರ ಪಠನ, ಜಿನ ಸ್ತವನ, ಪೂಜಾದಿಗಳನ್ನು ಮಾಡುವುದು, ಪಂಚಮಿ, ಅಷ್ಟಮಿ ಮತ್ತು ಚತುರ್ದಶಿ—ಈ ಪರ್ವತಿಥಿಗಳಲ್ಲಿ ಉಪವಾಸ ವ್ರತಾದಿಗಳನ್ನುಮಾಡಿ ಧರ್ಮಧ್ಯಾನದಲ್ಲಿ ಕಾಲಕಳೆಯುವುದು-ಈ ಕೆಲಸಗಳೆಲ್ಲಾ ಆತ್ಮನಿಗೆ ಹಿತವನ್ನುಂಟುಮಾಡುತ್ತದೆ. ಮನಸ್ಸಿಗೆ ಶಾಂತಿ ತರುತ್ತದೆ. ಮನಸ್ಸಿನಮೇಲೆ ಶುಭ ಪರಿಣಾಮವನ್ನು ಬೀರುತ್ತದೆ. ಆದುದರಿಂದ ಇಂಥಾ ಕಾಲವೇ ಶುಭಕಾಲ, ಹೀಗೆ ಆಚರಿಸುವುದರಿಂದ ನಮಗೆ ಶುಭವಾಗುವುದು.

ನುಡಿವೊಡೆ ದೇವ ನಿಮ್ಮಯ ಮಹಾಸಭೆಯೊಳ್ನುಡಿವಂತಿರೋಜೆಯಿಂ ।
ನುಡಿವುದು ಪೋಗುವಲ್ಲಿ ಮುಳುವಟ್ಟೆಯೊಳೆಯ್ದುವನಂತಿರೋಜೆಯಿಂ ॥
ನಡೆವುದು ಕುಳ್ಳಿತಿರ್ಪೊರಗುವುಣ್ಬೆಡೆಯೊಳ್ಸೆರೆಸಿಲ್ಕಿದಾತನಂ ।
ತೊಡನೆ ನಿಜಾತ್ಮಚಿಂತೆಯೊಳಿಹಂಗಘವೇನಪರಾಜಿತೇಶ್ವರಾ ! ॥೪೯॥

ನುಡಿವೊಡೆ ದೇವ ನಿಮ್ಮಯ ಮಹಾಸಭೆಯೊಳ್ ನುಡಿವಂತಿರೆ ಓಜೆಯಿಂ ನುಡಿವುದು,
ಪೋಗುವಲ್ಲಿ ಮುಳುವಟ್ಟೆಯೊಳ್ ಎಯ್ದುವನಂತಿರೆ ಓಜೆಯಿಂ ನಡೆವುದು,
ಕುಳ್ಳಿತಿರ್ಪ ಒರಗುವ ಉಣ್ಬ ಎಡೆಯೊಳ್ ಸೆರೆಸಿಲ್ಕಿದಾತನಂತೆ
ಒಡನೆ ನಿಜಾತ್ಮ ಚಿಂತೆಯೊಳ್ ಇಹಂಗೆ ಅಘವೇನ್ ಅಪರಾಜಿತೇಶ್ವರಾ !

ನುಡಿವೊಡೆ–ಮಾತನಾಡಿದರೆ, ದೇವ! ನಿಮ್ಮಯ–ನಿಮ್ಮ, ಮಹಾಸಭೆಯೊಳ್–ಮಹಾಸಭೆಯಲ್ಲಿ, ನುಡಿವಂತಿರೆ–ಮಾತನಾಡುವ ಹಾಗೆ, ಓಜೆಯಿಂ–ಔಚಿತ್ಯಪೂರ್ಣವಾಗಿ, ನುಡಿವುದು–ಮಾತನಾಡಬೇಕು, ಪೋಗುವಲ್ಲಿ–ನಡೆದಾಡುವಾಗ, ಮುಳುವಟ್ಟೆಯೊಳ್–ಮುಳ್ಳಿನ ಹಾದಿಯಲ್ಲಿ, ಎಯ್ದುವನಂತಿರೆ–ಹೋಗುವವನಂತೆ, ಓಜೆಯಿಂ–ಕ್ರಮದಿಂದ, ನಡೆವುದು–ನಡೆಯಬೇಕು, ಕುಳ್ಳಿತಿರ್ಪ–ಕುಳಿತುಕೊಳ್ಳುವ, ಒರಗುವ–ಮಲಗಿಕೊಳ್ಳುವ, ಉಣ್ಬ–ಊಟಮಾಡುವ, ಎಡೆಯೊಳ್ – ಸ್ಥಾನಗಳಲ್ಲಿ, ಸೆರೆಸಿಲ್ಕಿದಾತನಂತೆ–ಸೆರೆಸಿಕ್ಕಿದವನಂತೆ, ಒಡನೆ–ಕೂಡಲೆ, ನಿಜಾತ್ಮಚಿಂತೆಯೊಳ್–ತನ್ನ ಆತ್ಮಚಿಂತನೆಯಲ್ಲಿ, ಇಹಂಗೆ–ಇರುವವನಿಗೆ, ಅಘವೇನ್–ಪಾಪವೆಲ್ಲಿಯದು ? ಅಪರಾಜಿತೇಶ್ವರಾ !

ನಮ್ಮ ನುಡಿ ಹಿತ ಮಿತ ಮೃದುವಾಗಿರಬೇಕು. ತೀರ್ಥಂಕರನ ಸಮವಸರಣ ಸಭೆಯಲ್ಲಿ ಮಾತನಾಡುವಾಗ ಎಷ್ಟು ಜಾಗರೂಕರಾಗಿರುವೆವೊ ಹಾಗೆ ನಮ್ಮ ದಿನನಿತ್ಯ ವ್ಯವಹಾರದಲ್ಲಿಯೂ ಸಹ ಮಾತು ಶುದ್ಧವಾಗಿರಬೇಕು, ಔಚಿತ್ಯಪೂರ್ಣವಾಗಿರಬೇಕು. ನಮ್ಮ ನಡೆಯಲ್ಲಿಯೂ ಎಚ್ಚರಿಕೆಯಿಂದಿರಬೇಕು. ಯಾವ ಪ್ರಾಣಿಗೂ ಹಿಂಸೆಯಾಗದಂತೆ ಈರ್ಯಾಪಥಶುದ್ಧಿಯಿಂದ ಜಾಗರೂಕರಾಗಿ ನಡೆಯಬೇಕು. ಮುಳ್ಳುಹಾದಿಯಲ್ಲಿ ಹೋಗುವಾಗ ಎಷ್ಟು ಎಚ್ಚರವಹಿಸಿ ನಡೆಯುತ್ತೇವೆಯೋ ಹಾಗೆ ಕ್ರಮಬದ್ಧವಾಗಿ ಗಮನವಿಟ್ಟು ನಡೆಯಬೇಕು. ಕುಳಿತುಕೊಳ್ಳುವಾಗ, ಮಲಗುವಾಗ, ಊಟಮಾಡುವಾಗಲೂ, ಆ ಸ್ಥಾನಗಳನ್ನು ಪರೀಕ್ಷಿಸಿ ನಮ್ಮ ಕ್ರಿಯೆಗಳಲ್ಲಿ ತೊಡಗಬೇಕು. ಹೀಗೆ ಮಾತನಾಡುವಾಗ, ಓಡಾಡುವಾಗ, ಕುಳಿತುಕೊಳ್ಳುವಾಗ, ಮಲಗುವಾಗ, ಊಟಮಾಡುವಾಗ—ಪ್ರತಿ ಸಮಯದಲ್ಲೂ ಆತ್ಮಚಿಂತನೆಯಲ್ಲಿ ತೊಡಗಿರುವವನಿಗೆ ಪಾಪದ ಭಯವೆಲ್ಲಿಬಂತು! ಅವನು ಪಾಪಕರ್ಮದಿಂದ ಬಹುದೂರವಿರುತ್ತಾನೆ.

ಲೋಕದ ವಾರ್ತೆಯೊಳ್ಬಧಿರನಾತ್ಮಹಿತಂ ಪೊರಗಾದ ಮಾತಿನೊಳ್ ।
ಮೂಕತೆ ತನ್ನ ದೇಹಪರದೇಹದ ನೋಟದೊಳಂಧಕಂ ಪ್ರಮಾ–॥
ದೈಕದೆ ಕಂಡು ರಾಗಿಸಿದೊಡಂ ಸುಡು ಮಾಂಸವಿಕಾರವೆಂದು ಮೆ–।
ಯ್ಗೋಕರಿಪಾತನಂತಕನನಂಜಿಸನೇ ಅಪರಾಜಿತೇಶ್ವರಾ ! ॥೫೦॥

ಲೋಕದ ವಾರ್ತೆಯೊಳ್ ಬಧಿರನ್, ಆತ್ಮಹಿತಂ ಪೊರಗಾದ ಮಾತಿನೊಳ್
ಮೂಕತೆ, ತನ್ನದೇಹ ಪರದೇಹದ ನೋಟದೊಳ್ ಅಂಧಕಂ,
ಪ್ರಮಾದೈಕದೆ ಕಂಡು ರಾಗಿಸಿದೊಡಂ ಸುಡು ಮಾಂಸವಿಕಾರವೆಂದು
ಮೆಯ್ಗೆ ಓಕರಿಪಾತಂ, ಅಂತಕನಂ ಅಂಜಿಸನೇ ಅಪರಾಜಿತೇಶ್ವರಾ !

ಲೋಕದ ವಾರ್ತೆಯೊಳ್–ಲೋಕದ ಸಮಾಚಾರದಲ್ಲಿ, ಬಧಿರನ್–ಕಿವುಡನೂ, ಆತ್ಮಹಿತಂ ಪೊರಗಾದ–ಆತ್ಮಹಿತಕ್ಕೆ ಹೊರಗಾದ, ಮಾತಿನೊಳ್–ಮಾತಿನಲ್ಲಿ, ಮೂಕತೆ–ಮೂಗನೂ, ತನ್ನದೇಹ ಪರದೇಹದ–ತನ್ನ ದೇಹ ಬೇರೆಯವರ ಶರೀರದ, ನೋಟದೊಳ್ ಅಂಧಕಂ–ನೋಟದಲ್ಲಿ ಕುರುಡನೂ, ಪ್ರಮಾದೈಕದೆ–ಪ್ರಮಾದದಿಂದ, ಕಂಡು–ನೋಡಿ, ರಾಗಿಸಿದೊಡಂ–ಪ್ರೀತಿಸಿದರೂ, "ಸುಡು ಮಾಂಸ ವಿಕಾರಮೆಂದು–ಇದು (ಈ ಶರೀರವು) ಮಾಂಸಮಯವಾದುದು, ಇದನ್ನು ಸುಡು", ಎಂದು, ಮೆಯ್ಗೆ-ಶರೀರಕ್ಕೆ, ಓಕರಿಪಾತಂ - ಅಸಹ್ಯಪಡುವವನು, ಅಂತಕನಂ - ಯಮನನ್ನು, ಅಂಜಿಸನೇ-ಬೆದರಿಸುವುದಿಲ್ಲವೇ ? ಅಪರಾಜಿತೇಶ್ವರಾ !

ಲೌಕಿಕ ಸಮಾಚಾರಗಳಲ್ಲಿ ತಲೆಹಾಕದೆ, ಯಾವುದನ್ನೂ ಕಿವಿಗೆ ಹಾಕಿಕೊಳ್ಳದೆ, ಆತ್ಮದರ್ಶನಕ್ಕೆ ಹೊರತಾದ ಯಾವ ಮಾತುಗಳನ್ನೂ ಆಡದೆ ಮೂಕನಂತೆ ಇದ್ದು, ಈ ಅಶಾಶ್ವತವೂ, ಹೇಯವೂ, ಮಲಭರಿತವೂ ಆದ ತನ್ನ ದೇಹದಮೇಲೂ ಮತ್ತು ಇನ್ನಿತರರ ಶರೀರದ ಬಹಿರಂಗ ಸೌಂದರ್ಯತೆಗೂ ಮರುಳಾಗದೆ, ಅಂಧನಂತೆ ಇರುವುದೇ ವೀತರಾಗತ್ವವನ್ನು ಸಾಧಿಸುವ ಪ್ರಥಮಪ್ರಯತ್ನ. ಈ ಪರಮಗುರಿಯ ಸಾಧನೆಯಲ್ಲಿ ಎಡವಿಬೀಳುವ ಸಂಭವವುಂಟು. ಪ್ರಮಾದದಿಂದ ಯಾರನ್ನಾದರೂ ನೋಡಿ ಅವರ ಅಂಗಸೌಂದರ್ಯಕ್ಕೆ ಮನಸೋತರೂ, ಮರುಕ್ಷಣ ಎಚ್ಚರಗೊಂಡು, "ಈ ಹಾಳು ಶರೀರ ಮಾಂಸದ ಮುದ್ದೆ. ಇದರಮೇಲೆ ಆಸೆಯೆ ? ಸುಡು ಇದನ್ನು" ಎಂದು ಜುಗುಪ್ಸೆ ಪಡುವವನು ನಿಜಕ್ಕೂ ಪರಮಪದದ ಹಾದಿಯಲ್ಲಿ ಸಾಗುವನು. ಅಂಥವನು ಯಮನನ್ನು ಹೆದರಿಸುವುದರಲ್ಲಿ ಏನಾಶ್ಚರ್ಯ ? ಅಂದರೆ ಈ ಜನನ ಮರಣಗಳ ಸಂಕೋಲೆಗಳಿಂದ ಪಾರಾಗಬಲ್ಲನು.

ನೋಡಿದೊಡೆಲ್ಲಿಯುಂ ತನುವಿನೊಳ್ಮತಿಸೋಲದೆ ಶುದ್ಧಜೀವನಂ |
ನೋಡುವ ಮಾತನಾಡಿದೊಡೆ ಶಾಂತಿ ಶುಭಂ ಪವಣಾಗೆ ಪೇಳ್ವ ತಾಂ ||
ಪಾಡಿದೊಡತ್ತಲಿತ್ತ ತೊನೆದಾಡದೆ ನಿನ್ನೊಳೆ ನಟ್ಟಚಿತ್ತದಿಂ |
ಪಾಡುವನಾಗಿಯುಂ ಕಡು ವಿರಾಗಿಯಲಾ ಅಪರಾಜಿತೇಶ್ವರಾ ! ||೫೧||

ನೋಡಿದೊಡೆ ಎಲ್ಲಿಯುಂ ತನುವಿನೊಳ್ ಮತಿಸೋಲದೆ ಶುದ್ಧ
ಜೀವನಂ ನೋಡುವ, ಮಾತನಾಡಿದೊಡೆ ಶಾಂತಿ ಶುಭಂ ಪವಣಾಗೆ ಪೇಳ್ವ,
ತಾಂ ಪಾಡಿದೊಡೆ ಅತ್ತಲಿತ್ತ ತೊನೆದಾಡದೆ ನಿನ್ನೊಳೆ
ನಟ್ಟ ಚಿತ್ತದಿಂ ಪಾಡುವನ್, ಆಗಿಯುಂ ಕಡು ವಿರಾಗಿಯಲಾ ಅಪರಾಜಿತೇಶ್ವರಾ !

ನೋಡಿದೊಡೆ–ನೋಡಿದರೆ, ಎಲ್ಲಿಯುಂ ತನುವಿನೊಳ್–ಎಲ್ಲಿಯೂ ಶರೀರದಲ್ಲಿ, ಮತಿಸೋಲದೆ–ಮನಸೋಲದೆ, ಶುದ್ಧಜೀವನಂ ನೋಡುವ–ಪರಿಶುದ್ಧ ಆತ್ಮನನ್ನು ನೋಡುವ, ಮಾತನಾಡಿದೊಡೆ–ಮಾತನಾಡಿದರೆ, ಶಾಂತಿ ಶುಭಂ–ಶಾಂತಿಯನ್ನೂ ಮಂಗಳವನ್ನೂ, ಪವಣಾಗೆ ಪೇಳ್ವ–ಔಚಿತ್ಯವರಿತು ಹೇಳುವ, ತಾಂ ಪಾಡಿದೊಡೆ–ತಾನು ಹಾಡಿದರೆ, ಅತ್ತಲಿತ್ತ–ಆಕಡೆ ಈಕಡೆ, ತೊನೆದಾಡದೆ–ಅಲ್ಲಾಡದೆ, ನಿನ್ನೊಳೆ ನಟ್ಟಚಿತ್ತದಿಂ–ನಿನ್ನಲ್ಲೇ ಸ್ಥಿರವಾದ ಮನಸ್ಸಿನಿಂದ, ಪಾಡುವನ್–ಹಾಡುವವನು, ಆಗಿಯುಂ–ಈ ತೆರನಾಗಿ ಮಾಡುವವನಾಗಿಯೂ, ಕಡು ವಿರಾಗಿಯಲಾ – ಶ್ರೇಷ್ಠ ವಿರಾಗಿಯಲ್ಲವೇ? ಅಪರಾಜಿತೇಶ್ವರಾ!

ಯೋಗಿಯಾದವನು ಎಲ್ಲಿ ನೋಡಿದರೂ ಶುದ್ಧದೃಷ್ಟಿಯಿಂದಲೇ ನೋಡುತ್ತಾನೆ. ಬಹಿರಂಗದ ಯಾವ ರೂಪಕ್ಕೂ ಮರುಳಾಗದೆ, ಪ್ರತಿಕ್ಷಣದಲ್ಲೂ ಪರಿಶುದ್ಧ ಆತ್ಮನನ್ನು ಮಾತ್ರ ನೆನೆದು ಈಕ್ಷಿಸುತ್ತಿರುತ್ತಾನೆ. ಅವನು ಮಾತನಾಡಿದರೂ ಆ ಮಾತು ಹಿತ, ಮಿತ, ಹಾಗು ಮೃದುವಾಗಿರುತ್ತದೆ. ಶಾಂತಿ ಮತ್ತು ಶುಭವನ್ನೇ ಕೋರುತ್ತಿರುತ್ತದೆ. ಯಾವ ಜೀವಿಗೂ ಅವನ ಮಾತಿನಿಂದ ಹಿಂಸೆಯಾಗುವುದಿಲ್ಲ. ಭಗವಂತನನ್ನು ಕುರಿತು ಹಾಡಲು ಪ್ರಾರಂಭಿಸಿದರೆ ತದೇಕಚಿತ್ತದಿಂದ, ತಾದಾತ್ಮಭಾವದಿಂದ, ಭಗವಂತನಲ್ಲೇ ಸ್ಥಿರನಾಗಿ ಮನಸ್ಸನ್ನು ಅತ್ತಿತ್ತ ತೂಗಗೊಡದೆ ಹಾಡುವನು. ಅವನ ರಾಗ ವೈರಾಗ್ಯದಿಂದ ತುಂಬಿ ತುಳುಕಾಡುತ್ತಿರುವುದು. ಈ ತೆರನಾಗಿ ಸಾಧನೆ ಮಾಡಿದರೂ ಅವನು ಶ್ರೇಷ್ಠ ವಿರಾಗಿಯಾಗಿಯೇ ಮೆರೆಯುವನು, ಲೌಕಿಕಾಸಕ್ತಿಯಿಂದ ಬಿಡುಗಡೆಹೊಂದಿ ಪಾರಮಾರ್ಥಿಕಾಸಕ್ತಿಯನ್ನು ಬೆಳೆಸಿಕೊಂಡಿರುತ್ತಾನೆ, ಇಂಥಹವನನ್ನೇ ಅನಾಸಕ್ತನೆನ್ನುವರು.

ಕಣ್ಮಲರಳ್ಕರಿಂದೊಸರೆ ನಿಮ್ಮನೆ ನೋಡುತಮಂತರಂಗದೊಳ್ |
ಪೊಣ್ಮೆ ವಿಶೋಧಿ ಭಾವಿಸುತೆ ನಾಲಗೆರಾಗಿಸೆ ಪಾಡುತಂಗದೊಳ್ ||
ಉಣ್ಮಿರೆ ರೋಮಜಾಲವೆರಗುತ್ತನುಕಂಪನವೆತ್ತ ಕೆಯ್ಗಳಿಂ–|
ದಣ್ಮಿ ತವಾಂಘ್ರಿಗಳ್ಗಲರನರ್ಚಿಪೆನೆಂದಪರಾಜಿತೇಶ್ವರಾ ! ||೫೨||

ಕಣ್ಮಲರ್ ಅಳ್ಕರಿಂದ ಒಸರೆ ನಿಮ್ಮನೆ ನೋಡುತಂ, ಅಂತರಂಗದೊಳ್
ಪೊಣ್ಮೆ ವಿಶೋಧಿ ಭಾವಿಸುತೆ, ನಾಲಗೆ ರಾಗಿಸೆ ಪಾಡುತ, ಅಂಗದೊಳ್
ಉಣ್ಮಿರೆ ರೋಮಜಾಲವು ಎರಗುತ್ತ, ಅನುಕಂಪನವೆತ್ತ ಕೆಯ್ಗಳಿಂದ
ಅಣ್ಮಿ ತವ ಅಂಘ್ರಿಗಳ್ಗೆ ಅಲರಂ ಅರ್ಚಿಪೆನ್ ಎಂದು ಅಪರಾಜಿತೇಶ್ವರಾ !

ನಿಮ್ಮನೆ ನೋಡುತಂ–ನಿಮ್ಮನ್ನೇ ನೋಡುತ್ತ, ಕಣ್‌ಮಲರ್–ಕಣ್ಣೆಂಬ ಪುಷ್ಪವು, ಅಳ್ಕರಿಂದ–ಪ್ರೀತಿಯಿಂದ, ಒಸರೆ–ನೀರು ಸುರಿಸಲು, ಅಂತರಂಗದೊಳ್–ಅಂತರಂಗದಲ್ಲಿ. ಭಾವಿಸುತೆ–ನಿನ್ನನ್ನೇ ಚಿಂತಿಸುತ್ತ, ವಿಶೋಧಿ ಪೊಣ್ಮೆ–ವಿಶುದ್ಧತೆಯು ಹೊರಹೊಮ್ಮಲು, ಪಾಡುತ–(ನಿನ್ನನ್ನೇ ಕುರಿತು) ಹಾಡುತ್ತ, ನಾಲಗೆ ರಾಗಿಸೆ–ನಿನ್ನಲ್ಲೇ ಆಸಕ್ತಿಹೊಂದಲು, ಎರಗುತ್ತ–ನಿಮಗೆ ನಮಸ್ಕಾರ ಮಾಡುತ್ತ, ಅಂಗದೊಳ್–ಶರೀರದಲ್ಲಿ, ರೋಮಜಾಲವು ಉಣ್ಮಿರೆ–ರೋಮಾಂಚನವಾಗುತ್ತಿರಲು, ಅನುಕಂಪನವೆತ್ತ ಕೆಯ್ಗಳಿಂದ–ವಾತ್ಸಲ್ಯಭಾವಯುಕ್ತವಾದ ಕೈಗಳಿಂದ, ಅಣ್ಮಿ–ಶಕ್ತಿಹೊಂದಿ. ತವ ಅಂಘ್ರಿಗಳ್ಗೆ–ನಿಮ್ಮ ಪಾದಗಳಿಗೆ, ಅಲರಂ–ಪುಷ್ಪವನ್ನು, ಅರ್ಚಿಪೆನ್ ಎಂದು-ಯಾವಾಗ ಅರ್ಚಿಸುವೆನು? ಅಪರಾಜಿತೇಶ್ವರಾ!

ಜಿನಮೂರ್ತಿಯನ್ನು ಕಂಡೊಡನೆ ಭಕ್ತನ ಕಣ್ಣುಗಳಲ್ಲಿ ಆನಂದಾಶ್ರುವು ಸುರಿಯಬೇಕು. ಅದು ಅವನ ಸಮ್ಯಕ್ತ್ವವನ್ನು ಸೂಚಿಸುತ್ತದೆ. ಭಗವಂತನನ್ನು ತನ್ನ ಹೃದಯಕಮಲದಲ್ಲಿ ಸ್ಥಾಪಿಸಿ ಧ್ಯಾನಿಸುತ್ತ, ಆತ್ಮನ ಅನಂತ ಸಿರಿಯನ್ನು ಚಿಂತಿಸುತ್ತ ಇದ್ದರೆ,ಶುದ್ಧಪರಿಣಾಮವುಂಟಾಗಿ ನಿರ್ಮಲತೆಯ ಧವಳಾಕಾರವು ಆತ್ಮನಲ್ಲಿ ಕಂಗೊಳಿಸುತ್ತದೆ. ಜಿನೇಂದ್ರನನ್ನು ಕುರಿತು ಭಕ್ತಿಪರಾಕಾಷ್ಠತೆಯಿಂದ ಹಾಡಲು ನಾಲಗೆ ತವಕಗೊಳ್ಳುತ್ತದೆ. ಮೈಯೆಲ್ಲಾ ಕಣ್ಣಾಗಿ, ಮೈಯೆಲ್ಲಾ ಮನಸಾಗಿ, ಜಿನೇಶ್ವರನನ್ನು ಕಂಡು ರೋಮಾಂಚನಗೊಂಡು, ವಾತ್ಸಲ್ಯಭಾವದಿಂದ ಅವನ ಪಾದಾರವಿಂದಗಳಿಗೆ ಪುಷ್ಪಾದಿಗಳನ್ನು ಅರ್ಪಿಸುವ ಭಾಗ್ಯ ಸಾಮಾನ್ಯವೇ ? ಈ ಅನುಪಮಭಾಗ್ಯ ಎಂದಿಗೆ ಲಭಿಸೀತು !

ಮಾತಿನ ಮಾಲೆಯೇಕೆ ಜಿನ ನಿನ್ನೆಡೆ ತನ್ನೆಡೆಯಲ್ಲದನ್ಯರೊಳ್ ।
ಪ್ರೀತಿಯನಾವನೆಯ್ದಿದನವಂ ತಳುವೇನಳಲೆಯ್ದಿದಂ ಮಹಾ-॥
ಭೀತಿಯನೆಯ್ದಿದಂ ಭವಸಮುದ್ರಮನೆಯ್ದಿದನೆಂದೊಡಾತ್ಮಸ-।
ದ್ಭೂತಿಗೆ ನೀನೆ ಮಾನ್ಯ ಪೆರರಿಂ ಫಲವೇನಪರಾಜಿತೇಶ್ವರಾ ! ॥೫೩॥

ಮಾತಿನ ಮಾಲೆಯೇಕೆ ಜಿನ, ನಿನ್ನೆಡೆ ತನ್ನೆಡೆಯಲ್ಲದೆ ಅನ್ಯರೊಳ್
ಪ್ರೀತಿಯಂ ಆವನ್ ಎಯ್ದಿದನ್, ಅವಂ ತಳುವೇಂ ಅಳಲ್ ಎಯ್ದಿದಂ
ಮಹಾಭೀತಿಯನ್ ಎಯ್ದಿದಂ ಭವಸಮುದ್ರಮಂ ಎಯ್ದಿದನ್, ಎಂದೊಡೆ
ಆತ್ಮಸದ್ಭೂತಿಗೆ ನೀನೆ ಮಾನ್ಯ ಪೆರರಿಂ ಫಲವೇನ್ ಅಪರಾಜಿತೇಶ್ವರಾ !

ಮಾತಿನ ಮಾಲೆ ಏಕೆ ಜಿನ !-ಹೆಚ್ಚು ಮಾತುಗಳೇಕೆ ? ಜಿನೇಶ್ವರ !, ನಿನ್ನೆಡೆ-ನಿನ್ನ ಸ್ಥಾನವು, ತನ್ನೆಡೆಯಲ್ಲದೆ-ತನ್ನ ಸ್ಥಾನವೆಂದು ತಿಳಿಯದೆ, ಅನ್ಯರೊಳ್-ಬೇರೆಯವರಲ್ಲಿ, ಪ್ರೀತಿಯಂ-ಪ್ರೀತಿಯನ್ನು, ಆವನ್ ಎಯ್ದಿದನ್-ಯಾವನು ಹೊಂದಿದನೋ, ಅವಂ-ಅವನು, ತಳುವೇಂ-ನಿಧಾನವೇನು ?, ಅಳಲ್ ಎಯ್ದಿದಂ-ದುಃಖವನ್ನು ಹೊಂದಿದನು, ಮಹಾಭೀತಿಯನ್ ಎಯ್ದಿದನ್-ಮಹಾಭೀತಿಯನ್ನು ಹೊಂದಿದನು, ಭವಸಮುದ್ರಮಂ ಎಯ್ದಿದನ್-ಸಂಸಾರವೆಂಬ ಸಮುದ್ರವನ್ನು ಹೊಂದಿದನು, ಎಂದೊಡೆ-ಎಂದರೆ, ಆತ್ಮಸದ್ಭೂತಿಗೆ-ಆತ್ಮ ಸಂಪತ್ತಿಗೆ, ನೀನೆ ಮಾನ್ಯ-ನೀನೇ ಮಾನ್ಯನು, ಪೆರರಿಂ-ಬೇರೆಯವರಿಂದ, ಫಲವೇನ್-ಪ್ರಯೋಜನವೇನು ? ಅಪರಾಜಿತೇಶ್ವರಾ !

ಸುಮ್ಮನೆ ಮಾತಿನ ಸುರಿಮಳೆಯಿಂದ ಪ್ರಯೋಜನವೇನು ಜಿನೇಂದ್ರ! ನೀನಿರುವ ಸಿದ್ಧಲೋಕವೇ ತಾನೂ ತಲುಪಬೇಕಾಗಿರುವ ಸ್ಥಳವೆಂದು ಯಾವನು ಚಿಂತಿಸದೆ, ಈ ಲೋಕ ವ್ಯವಹಾರದಲ್ಲಿ ಮುಳುಗಿ ಮೋಹಕರ್ಮದ ಪಾಶಕ್ಕೆ ಸಿಲುಕುವನೋ, ಅವನಿಗೆ ನಿಶ್ಚಯವಾಗಿ ದುರ್ದಶೆ ಕಾದಿದೆ. ಸಾವಕಾಶವೇ ಯಿಲ್ಲ ! ಕರ್ಮದ ಫಲದಿಂದ ಅತೀವ ದುಃಖವನ್ನನುಭವಿಸುವನು, ಭೀತಿಯಿಂದ ತತ್ತರಿಸುವನು, ಚತುರ್ಗತಿಗಳ ಸಂಸಾರಭ್ರಮಣದಲ್ಲಿ ಸಿಕ್ಕಿ ನರಳುವನು, ಈ ಭವಸಮುದ್ರವನ್ನು ಈಜಿ ಪಾರಾಗುವ ಶಕ್ತಿಯನ್ನು ಕಳೆದುಕೊಳ್ಳುವನು, ಈ ವಿಚಾರವನ್ನು ಗಾಢವಾಗಿ ಯೋಚಿಸಿದರೆ, ಭಗವಂತ ! ನೀನೊಬ್ಬನೇ ಆತ್ಮಸಂಪತ್ತಿಗೆ, ಆತ್ಮಸಾಮ್ರಾಜ್ಯಕ್ಕೆ ಮಾನ್ಯ, ನಿನ್ನನ್ನುಮಾತ್ರ ಶರಣುಹೋಗಬೇಕೇ ವಿನಹ ಬೇರೆಯವರಿಂದ ಏನೇನೂ ಫಲವಿಲ್ಲ.

ಆವನುಮಕ್ಕೆ ನಿಮ್ಮಡಿಗಳಂ ನೆನೆವಾತನೆ ನನ್ನ ಬಂಧು ಸ-|
ದ್ಭಾವದೆ ಪೂಜಿಪಾತನೆ ಸಖಂ ಶ್ರುತಯೋಗಸಮೃದ್ಧನೆನ್ನ ಸಂ-||
ಜೀವಕನೆಂಬೆನೇಕಿನಿತು ಪಕ್ಷವಿದೆಂಬೆಯು ನನ್ನ ಮೆಚ್ಚಿನಾ |
ದೇವನ ನಚ್ಚಿದಾತನೆನಗನ್ಯನೆ ಪೇಳಪರಾಜಿತೇಶ್ವರಾ ||೩೪||

ಆವನುಂ ಅಕ್ಕೆ ನಿಮ್ಮಡಿಗಳಂ ನೆನೆವಾತನೆ ನನ್ನ ಬಂಧು,
ಸದ್ಭಾವದೆ ಪೂಜಿಪಾತನೆ ಸಖಂ, ಶ್ರುತಯೋಗ ಸಮೃದ್ಧನ್ ಎನ್ನ
ಸಂಜೀವಕನ್ ಎಂಬೆನ್, ಏಕೆ ಇನಿತು ಪಕ್ಷವಿದು ಎಂಬೆಯ,
ನನ್ನ ಮೆಚ್ಚಿನಾ ದೇವನ ನಚ್ಚಿದಾತನ್ ಎನಗನ್ಯನೆ ಪೇಳ್ ಅಪರಾಜಿತೇಶ್ವರಾ !

ಆವನುಂ ಅಕ್ಕೆ-ಯಾವನೇ ಆಗಲಿ, ನಿಮ್ಮಡಿಗಳಂ-ನಿಮ್ಮ ಪಾದಗಳನ್ನು, ನೆನೆವಾತನೆ-ಸ್ಮರಿಸುವವನೇ, ನನ್ನ ಬಂಧು-ನನ್ನ ಬಂಧುವು, ಸದ್ಭಾವದೆ-ಸದ್ಭಾವನೆಯಿಂದ. ಪೂಜಿಪಾತನೆ-ಪೂಜಿಸುವವನೇ (ನಿನ್ನನ್ನು), ಸಖಂ-(ನನ್ನ) ಮಿತ್ರನು, ಶ್ರುತಯೋಗ ಸಮೃದ್ಧನ್-ಶಾಸ್ತ್ರನೈಪುಣ್ಯತೆಯಿಂದ ಪರಿಪೂರ್ಣನಾದವನು, ಎನ್ನ-ನನ್ನ. ಸಂಜೀವಕನ್-ಸಂಜೀವನ ಔಷಧವು, ಎಂಬೆನ್-ಎಂದು ಹೇಳುತ್ತೇನೆ, ಏಕೆ ಇನಿತು-ಏಕೆ ಇಷ್ಟು, ಪಕ್ಷವಿದು ಎಂಬೆಯ-ಪಕ್ಷಪಾತವೆಂದು ಹೇಳುತ್ತೀಯಾ ? ನನ್ನ ಮೆಚ್ಚಿನ-ನನಗೆ ಮೆಚ್ಚಿಗೆಯಾದ, ಆ ದೇವನ-ಆ ದೇವನನ್ನು, ನಚ್ಚಿದಾತನ್-ನಂಬಿದವನು, ಎನಗೆ-ನನಗೆ, ಅನ್ಯನೆ ಪೇಳ್-ಬೇರೆಯವನೇ ? ಹೇಳು, ಅಪರಾಜಿತೇಶ್ವರಾ !

ಯಾರೇ ಆಗಲಿ ಜಿನೇಂದ್ರನ ಪಾದಾರವಿಂದಗಳಿಗೆ ಶರಣಾದವನೇ ನನ್ನ ಬಂಧು, ಆ ವೀತರಾಗಿ ಭಗವಂತನನ್ನು ಶುಭಭಾವನೆಯಿಂದ, ನಿಷ್ಕಲ್ಮಷ ಹೃದಯದಿಂದ ಪೂಜೆ ಮಾಡುವವನೇ ನನ್ನ ಮಿತ್ರನು. ಪರಮ ಜಿನೇಂದ್ರವಾಣಿಯಲ್ಲಿ ಶ್ರದ್ಧೆ ನಂಬಿಕೆಗಳನ್ನಿಟ್ಟು ಅವುಗಳನ್ನು ಆಳವಾಗಿ ಅಭ್ಯಾಸಮಾಡಿ ಜ್ಞಾನಿಯಾದವನೇ ನನ್ನ ಸಂಜೀವಕನು, ಅಂತಹವನೇ ನನ್ನನ್ನು ಈ ಭವರೋಗದಿಂದ ಪಾರುಮಾಡಲು ಶಕ್ತನು ಎಂದು ಸದಾ ಚಿಂತಿಸುತ್ತಿರುವೆನು. ಇಂತಹ ಭವ್ಯಾತ್ಮರಮೇಲೆ ಏಕೆ ಇಷ್ಟು ಮೋಹ ಹಾಗೂ ಪಕ್ಷಪಾತ ಎಂದು ಯಾರಾದರೂ ಕೇಳಬಹುದಲ್ಲವೆ ? ಅದಕ್ಕೆ ನನ್ನ ಉತ್ತರ ಇದು. ನನಗೆ ಮೆಚ್ಚಿಗೆಯಾದ, ನಾನು ಶರಣಾಗಿರುವ ಜಿನೇಂದ್ರನನ್ನೇ ನೆಚ್ಚಿದವನು ನನಗೆ ಹಿತವಾದವನಲ್ಲವೆ ? ಅವನೇ ನನ್ನ ಬಂಧು, ಅವನೇ ನನ್ನ ನಿಜವಾದ ಮಿತ್ರ. ಜಾತಿಯಿಂದ ಯಾರೂ ಉತ್ತಮರಾಗಲು ಸಾಧ್ಯವಿಲ್ಲ. ಚಾರಿತ್ರದಿಂದ ಮಾತ್ರ ಸಾಧ್ಯ. ಚಾರಿತ್ರವನ್ನು ಸಾಧಿಸುವ ಮಾರ್ಗ ಜಿನೇಂದ್ರಭಕ್ತಿ. ಭಕ್ತರಿಗೆ ಜಾತಿ ಎಂಬುದು ಖಂಡಿತ ಇಲ್ಲ. ಭಕ್ತಿ ದೊರೆತರೆ ದೇಹ, ಮನಸ್ಸು, ಆತ್ಮ ಎಲ್ಲ ನಿರ್ಮಲವಾಗಿಬಿಡುತ್ತದೆ.

ಲೋಕಮಿದೆಲ್ಲವುಂ ಸ್ಮರಪಿಶಾಚವಿಜೃಂಭಿತಮಿಂದ್ರಜಾಲವಿ-|
ದ್ಯಾಕಥನಂ ಯಮಾಸುರನ ದೀಪನದಾಹುತಿಯಲ್ಲಿ ಪಕ್ಷದಿಂ ||
ಶೋಕಮನಾರ್ಗೆ ಮಾಳ್ಪೆನೊಲಿದಿರ್ಪೆನದಾರ್ಗೆ ಕನಲ್ವೆನಾರ್ಗೆನಲ್ |
ಮೂಕತೆಯುಂ ದಯೋಕ್ತಿ ಯೆರಡೇ ಹಿತಮಿನ್ನಪರಾಜಿತೇಶ್ವರಾ ! ||೫೫||

ಲೋಕಂ ಇದೆಲ್ಲವುಂ ಸ್ಮರಪಿಶಾಚ ವಿಜೃಂಭಿತಂ, ಇಂದ್ರಜಾಲ
ವಿದ್ಯಾಕಥನಂ ಯಮಾಸುರನ ದೀಪನದ ಆಹುತಿ, ಅಲ್ಲಿ ಪಕ್ಷದಿಂ
ಶೋಕಮಂ ಆರ್ಗೆ ಮಾಳ್ಪೆಂ ಒಲಿದಿರ್ಪೆನ್ ಆದಾರ್ಗೆ ಕನಲ್ವೆನ್
ಆರ್ಗೆನಲ್, ಮೂಕತೆಯುಂ ದಯೋಕ್ತಿ ಎರಡೇ ಹಿತಂ ಇನ್ನು ಅಪರಾಜಿತೇಶ್ವರಾ !

ಲೋಕಂ ಇದೆಲ್ಲವೂ-ಈ ಲೋಕವೆಲ್ಲವೂ, ಸ್ಮರಪಿಶಾಚ-ಮನ್ಮಥನೆಂಬ ಪಿಶಾಚದ, ವಿಜೃಂಭಿತಂ-ಆಡಂಬರದಿಂದ ಕೂಡಿದೆ, ಇಂದ್ರಜಾಲವಿದ್ಯಾ–ಇಂದ್ರಜಾಲವಿದ್ಯೆಯ, ಕಥನಂ–ಮಾತಾಗಿದೆ. ಯಮಾಸುರನ–ಯಮನೆಂಬ ದೈತ್ಯನ, ದೀಪನದ–ಉರಿಯ, ಆಹುತಿ–ಆಹುತಿಯಾಗಿದೆ, ಅಲ್ಲಿ ಪಕ್ಷದಿಂ–ಅಲ್ಲಿ ಪಕ್ಷಪಾತದಿಂದ, ಶೋಕಮಂ ಆರ್ಗೆ ಮಾಳ್ಪೆಂ – ಯಾರಿಗೆ ಶೋಕವನ್ನುಮಾಡಲಿ, ಒಲಿದಿರ್ಪೆನ್ ಆದಾರ್ಗೆ–ಯಾರಿಗೆ ಪ್ರೀತಿಸಲಿ, ಕನಲ್ವೆನ್ ಆರ್ಗೆ–ಯಾರಿಗೆ ಸಿಟ್ಟುಮಾಡಲಿ, ಎನಲ್-ಎನ್ನಲು, ಇನ್ನು, ಮೂಕತೆಯುಂ–ಮೌನವೂ, ದಯೋಕ್ತಿ–ಕರುಣೆಯಮಾತು, ಎರಡೇ ಹಿತಂ–ಎರಡೇ ಹಿತಕರವಾದುದು, ಅಪರಾಜಿತೇಶ್ವರಾ !

ಈ ಲೋಕದಲ್ಲಿ ಎತ್ತನೋಡಿದರೂ ಕಾಮ, ಕ್ರೋಧಾದಿಗಳೇ ತಾಂಡವವಾಡುತ್ತಿದೆಯಲ್ಲಾ ! ರಾಗದ್ವೇಷಗಳಿಗೆ ಜನ ಬಲಿಬಿದ್ದು ಕೆಡುತ್ತಿರುವರಲ್ಲ ! ಸತ್ಯಮಾರ್ಗದಲ್ಲಿ ನಡೆಯದೆ, ಮಿಥ್ಯಾದೃಷ್ಟಿಗಳಾಗಿ ಜಿನವಾಣಿಯನ್ನು ಕಡೆಗಣಿಸಿದ್ದಾರೆ. ಎಲ್ಲಿ ನೋಡಿದರೂ ಇಂದ್ರಜಾಲವಿದ್ಯಾಕಥನವೇ ಕಥನ. ತತ್ತ್ವಶಾಸ್ತ್ರದ ಅಧ್ಯಯನದ ರುಚಿಯೇ ಇಲ್ಲ. ನಿಷ್ಫಲವಾದ ಜೀವನವನ್ನು ನಡೆಸಿ ಕೊನೆಗೆ ಸಾವಿನ ದವಡೆಗೆ ಸಿಕ್ಕಿ ನುಚ್ಚುನೂರಾಗುತ್ತಿದ್ದಾರೆ. ಇಂತಹ ದಾರುಣ ಪರಿಸ್ಥಿತಿಯಲ್ಲಿರುವ ಈ ಲೋಕದಲ್ಲಿ ಯಾರಿಗೆ ನನ್ನ ಶೋಕವನ್ನು ತೋಡಿಕೊಳ್ಳಲಿ ? ಯಾರನ್ನು ನನ್ನ ಹತ್ತಿರದವರೆಂದು ಪ್ರೀತಿಸಲಿ ? ಯಾರಲ್ಲಿ ನಾನು ಕೋಪಿಸಿಕೊಳ್ಳಲಿ ? ದಿಕ್ಕೇ ತೋಚುವುದಿಲ್ಲವಲ್ಲ ! ಈ ಜಂಜಾಟವನ್ನು ನೋಡಿದರೆ ಮೌನ ಹಾಗೂ ದಯಾಭಾವ ಎರಡೇ ನನ್ನ ಆತ್ಮಕ್ಕೆ ಹಿತವಾದುದೆಂದು ತೋರುತ್ತದೆ.

ಮೊನ್ನೆಬರುತ್ತೆ ಕಂಡೆನವನಂ ಮೃತವಾದನೆ ಯಾದನಕ್ಕಟಾ ! |
ನಿನ್ನೆಸುಗೋಷ್ಠಿಗೆಯ್ದೆ ನಿವನೊಳ್ ಲಯವಾದನೆ ಯಾದನಯ್ಯೋ ! ಇಂ ||
ದೆನ್ನೊಡವಂದನೀತನಕಟಾ ! ಕಡೆಗಂಡನೆ ಕಂಡನೆಂಬ ಮಾ-|
ತಂ ನೆರೆ ಕೇಳುತೆನ್ನೊಡಲನಚ್ಚುವೆನೆಂತಪರಾಜಿತೇಶ್ವರಾ ! ||೫೬||

ಮೊನ್ನೆ ಬರುತ್ತೆ ಕಂಡೆನ್ ಅವನಂ ಮೃತವಾದನೆ, ಆದನ್ ಅಕ್ಕಟಾ !,
ನಿನ್ನೆ ಸುಗೋಷ್ಠಿಗೆಯ್ದೆನ್ ಇವನೊಳ್ ಲಯವಾದನೆ ಆದನಯ್ಯೋ !,
ಇಂದು ಎನ್ನೊಡವೆಂದನ್ ಈತನ್ ಅಕಟಾ ! ಕಡೆಗಂಡನೆ ಕಂಡನ್,
ಎಂಬ ಮಾತಂ ನೆರೆ ಕೇಳುತ ಎನ್ನೊಡಲ ನಚ್ಚುವೆನೆಂತು ಅಪರಾಜಿತೇಶ್ವರಾ !

ಮೊನ್ನೆ ಬರುತ್ತೆ–ಮೊನ್ನೆ ಬರುವಾಗ, ಕಂಡೆನ್ ಅವನಂ–ಅವನನ್ನು ನೋಡಿದೆನು, ಮೃತವಾದನೆ–ಸತ್ತನೆ ? ಆದನ್ ಅಕ್ಕಟಾ–ಅಹುದು, ಅಯ್ಯೋ !, ನಿನ್ನೆ ಸುಗೋಷ್ಠಿಗೆ ಎಯ್ದೆನ್ ಇವನೊಳ್–ನಿನ್ನೆ ಇವನ ಜೊತೆಯಲ್ಲಿ ಧರ್ಮಸಭೆಗೆ ಹೋದೆನು, ಲಯವಾದನೆ–ಮರಣವನ್ನು ಹೊಂದಿದನೇ ? ಆದನ್ ಅಯ್ಯೋ–ಅಹುದು, ಅಯ್ಯೋ !, ಇಂದು–ಈದಿನ, ಎನ್ನೊಡ ಬಂದನ್ ಈತನ್–ಈತನು ನನ್ನೊಡನೆ ಬಂದನು, ಅಕಟಾ–ಅಯ್ಯೋ !, ಕಡೆಗಂಡನೆ–ಕೊನೆಗಂಡನೇ ? ಕಂಡನ್–ಕಂಡನು, ಎಂಬ ಮಾತಂ–ಎಂಬ ಮಾತನ್ನು, ನೆರೆಕೇಳುತ–ಬಹಳವಾಗಿ ಕೇಳುತ್ತ, ಎನ್ನ ಒಡಲ–ನನ್ನ ಶರೀರವನ್ನು, ನಚ್ಚುವೆನ್ ಎಂತು–ಹೇಗೆ ನಂಬಲಿ ?, ಅಪರಾಜಿತೇಶ್ವರಾ !

'ಜಾತಸ್ಯ ಮರಣಂ ಧ್ರುವಂ' ಎಂಬ ನಿತ್ಯಸತ್ಯ ಎಲ್ಲರಿಗೂ ಗೊತ್ತಿದ್ದರೂ ಗೊತ್ತಿಲ್ಲದವರ ಹಾಗೆ ನಮ್ಮ ಬಾಳನ್ನು ನಡೆಸುತ್ತಿದ್ದೇವೆ. ಮೊನ್ನೆತಾನೆ ನೋಡಿ ಮಾತನಾಡಿಸಿದ ಸ್ನೇಹಿತ ಸತ್ತನೆಂಬ ಸುದ್ದಿ, ನಿನ್ನೆತಾನೆ ಒಟ್ಟಿಗೆಹೋಗಿ ಧಾರ್ಮಿಕ ಗೋಷ್ಠಿಯಲ್ಲಿ ಪಾಲ್ಗೊಂಡ ಮಿತ್ರನು ಇದ್ದಕ್ಕಿದ್ದಂತೆ ಕೊನೆಉಸಿರೆಳೆದನೆಂಬ ವಾರ್ತೆ, ಈ ಹೊತ್ತು ತನ್ನ ಜೊತೆಯಲ್ಲೇ ನಡೆದುಬರುತ್ತಿದ್ದ ಆಪ್ತನೊಬ್ಬ ಕುಸಿದುಬಿದ್ದು ಮರಣವನ್ನಪ್ಪಿದನೆಂಬ ವಿಷಯಗಳನ್ನು ಮೇಲಿಂದಮೇಲೆ ಕೇಳುತ್ತಿದ್ದರೂ, ನೋಡುತ್ತಿದ್ದರೂ, ಮನುಷ್ಯ ತನ್ನ ಸಾವೂ ಬೆನ್ನಹಿಂದೆಯೆ ಇದೆಯೆಂಬ ಭೀಕರ ಸತ್ಯವನ್ನು ಮನಗಾಣದೆ, ತನ್ನ ಶರೀರಪೋಷಣೆ ಹಾಗೂ ಲೌಕಿಕ ವ್ಯವಹಾರಗಳಲ್ಲೇ ಮುಳುಗಿರುವನಲ್ಲಾ ? ಎಂದಾದರೂ ಯಮನ ಬಾಯಿಗೆ ತುತ್ತಾಗುವ ಈ ಶರೀರವನ್ನು ನಚ್ಚುವುದು ಅವಿವೇಕವಲ್ಲವೇ ?

ಎಲೆಯೆಲೆ ಇತ್ತಲಿರ್ದ ಮೊಗವತ್ತೊಲೆದೀಕ್ಷಿಸೆ ಮುನ್ನ ಕಂಡರೊಳ್
ಕೆಲಬರನಲ್ಲಿ ಕಾಣಲರಿದಿಂತುಟು ತೋರುತ ಮಾಯಮಪ್ಪ ಮೆ–||
ಯ್ವಲೆಯೊಳೆ ಬಾಳ್ವೆನೆಂಬ ಮನವಲ್ಲದೆ ತತ್ತನುವಂ ತಪಂಗಳೊಳ್ |
ಸಲಿಸಿ ನಿಜತ್ವಮಂ ಪಡೆಯಲಂಜುವೆನೇಕಪರಾಜಿತೇಶ್ವರಾ ! ||೫೭||

ಎಲೆಯೆಲೆ ಇತ್ತಲಿರ್ದ ಮೊಗವು ಅತ್ತ ಒಲೆದು ಈಕ್ಷಿಸೆ, ಮುನ್ನ
ಕಂಡರೊಳ್ ಕೆಲಬರಂ ಅಲ್ಲಿ ಕಾಣಲ್ ಅರಿದು, ಇಂತುಟು ತೋರುತ
ಮಾಯಮಪ್ಪ ಮೆಯ್ವಲೆಯೊಳೆ ಬಾಳ್ವೆನೆಂಬ ಮನವಲ್ಲದೆ, ತತ್ ತನುವಂ
ತಪಂಗಳೊಳ್ ಸಲಿಸಿ ನಿಜತ್ವಮಂ ಪಡೆಯಲ್ ಅಂಜುವೆನೇಕೆ ಅಪರಾಜಿತೇಶ್ವರಾ !

ಎಲೆಯೆಲೆ ! ಇತ್ತಲಿರ್ದ–ಈಕಡೆಯಿದ್ದ, ಮೊಗವು–ಮುಖವು, ಅತ್ತ ಒಲೆದು ಈಕ್ಷಿಸೆ–ಆಕಡೆ ತಿರುಗಿ ನೋಡುವಷ್ಟರಲ್ಲಿ, ಮುನ್ನ ಕಂಡರೊಳ್–ಮೊದಲು ನೋಡಿದವರಲ್ಲಿ, ಕೆಲಬರಂ–ಕೆಲವರನ್ನು, ಅಲ್ಲಿ ಕಾಣಲ್ ಅರಿದು–ಅಲ್ಲಿ ನೋಡುವುದಕ್ಕಾಗುವುದಿಲ್ಲವು, ಇಂತುಟು–ಹೀಗೆ, ತೋರುತ–ಕಾಣಿಸುತ್ತ, ಮಾಯಮಪ್ಪ–ಮಾಯವಾಗುವ, ಮೆಯ್ ಒಲೆಯೊಳೆ–ಶರೀರವೆಂಬ ಬಲೆಯಲ್ಲಿ, ಬಾಳ್ವೆನ್ ಎಂಬ–ಬಾಳುವೆನೆಂಬ, ಮನವಲ್ಲದೆ–ಆಸೆಯಲ್ಲದೆ, ತತ್ ತನುವಂ–ಆ ಶರೀರವನ್ನು, ತಪಂಗಳೊಳ್–ತಪಸ್ಸುಗಳಲ್ಲಿ, ಸಲಿಸಿ–ಉಪಯೋಗಿಸಿ, ನಿಜತ್ವಮಂ ಪಡೆಯಲ್–ಆತ್ಮಸ್ವರೂಪವನ್ನು ಹೊಂದುವುದಕ್ಕೆ, ಅಂಜುವೆನ್ ಏಕೆ–ಏಕೆ ಭಯಪಡುತ್ತೇನೆ ? ಅಪರಾಜಿತೇಶ್ವರಾ !

ಮನುಷ್ಯನ ಜೀವನ ಎಷ್ಟು ಕ್ಷಣಿಕವೆಂದರೆ, ಈ ಕಡೆಯಿಂದ ಆ ಕಡೆಗೆ ಮುಖವನ್ನು ತಿರುಗಿಸುವುದರೊಳಗಾಗಿ ಮೊದಲು ಕಂಡವರಲ್ಲಿ ಎಷ್ಟೋಜನ ನಾಪತ್ತೆಯಾಗಿರುತ್ತಾರೆ. ಅವರಾಗಲೇ ತಮ್ಮ ಆಯುಷ್ಯವನ್ನು ಮುಗಿಸಿಕೊಂಡು ಕರ್ಮಾನುಸಾರ ಬೇರೆ ಗತಿಗೆ ಸಾಗಿರುತ್ತಾರೆ. ಈ ದೃಶ್ಯವನ್ನು ದಿನನಿತ್ಯ ನೋಡುತ್ತಿದ್ದರೂ, ಮೋಹಕಷಾಯದಿಂದ ಶರೀರದಲ್ಲಿ ಮಮತ್ವಬುದ್ಧಿಯನ್ನಿಟ್ಟು, ಬಲೆಯಲ್ಲಿ ಸಿಕ್ಕ ಪಶುವಿನಂತಿದ್ದರೂ ಬಾಳಬೇಕೆಂಬ ಆಸೆಯನ್ನು ಬಿಡಲಾಗದೆ ಒದ್ದಾಡುತ್ತಿರುವೆನು. ಎಚ್ಚೆತ್ತುಕೊಂಡು ವಿವೇಚನಾಪರನಾಗಿ, ಆತ್ಮ ಬೇರೆ, ಶರೀರ ಬೇರೆ ಎಂಬ ಭೇದವಿಜ್ಞಾನವನ್ನರಿದು, ತಪಸ್ಸು ಧ್ಯಾನಾದಿಗಳಲ್ಲಿ ತೊಡಗಿ ಆತ್ಮಸ್ವರೂಪವನ್ನು ಕಾಣಲು ಇನ್ನೂ ಹಿಂದುಮುಂದು ನೋಡುತ್ತಿರುವೆನಲ್ಲ ?

ಪೇಳವೆ ವೇಳೆವೇಳೆಗಿಳಿವಾಯುವನೀ ಗಳಿಯಾರಸನ್ನೆಯುಂ |
ಕೋಳಿಯುಮೋದುತಿರ್ಪ ತಿಥಿಪಾಠಕಘೋಷಣೆ ತಳ್ತುಪೇಳೆಯುಂ ||
ಕೇಳುತಮಂತವಕ್ಕಗಿಯದಂಗವಿದಂ ಸ್ಥಿರಮೆಂದೆ ನಚ್ಚಿ ನಿ-|
ನ್ನೋಳಿಗದಿಚ್ಛೆಯುಂ ಮರೆದು ಕೆಟ್ಟೆನಲಾ ಅಪರಾಜಿತೇಶ್ವರಾ ! ||೨೬

ಪೇಳವೆ ವೇಳೆ ವೇಳೆಗೆ ಇಳಿವ ಆಯುವಂ, ಈ ಗಳಿಯಾರ ಸನ್ನೆಯುಂ
ಕೋಳಿಯುಂ ಓದುತಿರ್ಪ ತಿಥಿ ಪಾಠಕಘೋಷಣೆ, ತಳ್ತು ಪೇಳೆಯುಂ
ಕೇಳುತಂ ಅಂತವಕ್ಕೆ ಅಗಿಯದೆ, ಅಂಗವಿದಂ ಸ್ಥಿರಮೆಂದೆ ನಚ್ಚಿ
ನಿನ್ನ ಓಲಗದ ಇಚ್ಛೆಯುಂ ಮರೆದು ಕೆಟ್ಟೆನಲಾ ಅಪರಾಜಿತೇಶ್ವರಾ !

ವೇಳೆ ವೇಳೆಗೆ-ಪ್ರತಿಕ್ಷಣಕ್ಕೂ, ಇಳಿವ-ಕಳೆದುಹೋಗುವ, ಆಯುವಂ-ಆಯುಷ್ಯವನ್ನು, ಈ ಗಳಿಯಾರ ಸನ್ನೆಯುಂ-ಈ ಗಡಿಯಾರದ ಸಂಜ್ಞೆಯೂ, ಕೋಳಿಯುಂ-ಕೋಳಿಯೂ, ಓದುತಿರ್ಪ-ಓದುತ್ತಿರುವ, ತಿಥಿಪಾಠಕ ಘೋಷಣೆ-ತಿಥಿಪಾಠಕರ ಘೋಷಣೆಯೂ, ಪೇಳವೆ-ಹೇಳುವುದಿಲ್ಲವೇ ? ತಳ್ತು ಪೇಳೆಯುಂ-ಹಾಗೆ ಸಾರಿ ಸಾರಿ ಹೇಳಿದರೂ, ಕೇಳುತಂ-ಕೇಳುತ್ತ, ಅಂತವಕ್ಕೆ-ಅವುಗಳಿಗೆ, ಅಗಿಯದೆ-ಹೆದರದೆ, ಅಂಗವಿದಂ-ಈ ಶರೀರವೇ, ಸ್ಥಿರಮೆಂದೆ ನಚ್ಚಿ-ಸ್ಥಿರವಾದುದೆಂದು ನಂಬಿ, ನಿನ್ನ ಓಲಗದ-ನಿನ್ನ ಸೇವೆಯ, ಇಚ್ಛೆಯುಂ-ಇಚ್ಛೆಯನ್ನು, ಮರೆದು-ಮರೆತು, ಕೆಟ್ಟೆನಲಾ-ಕೆಟ್ಟೆನಲ್ಲವೇ ? ಅಪರಾಜಿತೇಶ್ವರಾ !

ಗಡಿಯಾರದ ಟಿಕ್ ಟಿಕ್ ಶಬ್ದ, ಕೋಳಿಯ ಕೋ ಕೋ ಎಂಬ ಕೂಗು, ತಿಥಿಪಾಠಕರ ಘೋಷಣೆ, ಇವೆಲ್ಲವೂ ಪ್ರತಿಕ್ಷಣ ಸವೆಸುತ್ತಿರುವ ನಮ್ಮ ಆಯುಷ್ಯವನ್ನು ಸಾರಿ ಸಾರಿ ಹೇಳುತ್ತವೆ. ಈ ಶಬ್ದಗಳನ್ನು ಕೇಳಿಸಿಕೊಂಡೂ ಕಿವುಡನಂತೆ ವರ್ತಿಸುತ್ತ, ಬಾಳಿನ ಅನಿತ್ಯತೆಯ ಬಗ್ಗೆ ಚಿಂತಿಸುವುದೇಯಿಲ್ಲವಲ್ಲ. ಈ ಶರೀರವೇ ಸ್ಥಿರವೆಂದುನಂಬಿ, ಭಗವಂತನ ಸೇವೆಯನ್ನು ಬದಿಗೊತ್ತಿ ಅವಿವೇಕಿಯಂತೆ ಜೀವನವನ್ನು ಸಾಗಿಸುತ್ತಿರುವೆನಲ್ಲ !

ಪೊಕ್ಕು ಸಮಾನಚಿತ್ತವನೆ ಸಾಧಿಸಿ ಕರ್ಮನಿಬಂಧಮಂ ಲಯ-|
ಕಿಕ್ಕುವೆನೆಂದು ತಾಳ್ದು ತಪಮಂ ನಡೆಯುತ್ತೆಡೆಯೊಳ್ಕೆಲಂಬರೊಳ್ ||
ನಕ್ಕು ಕೆಲಂಬರೊಳ್ಮುನಿದು ಬಾಳ್ವುದಿದೇಂ ಬಿಡಪೋಗಿ ಮೂರುಗಂ-|
ಟಿಕ್ಕಿದ ಗಾದೆಯಾದೆನುಪಶಾಂತಿಯನೀಯುಪರಾಜಿತೇಶ್ವರಾ ! ||೫೯||

ಪೊಕ್ಕು ಸಮಾನಚಿತ್ತವನೆ ಸಾಧಿಸಿ ಕರ್ಮಬಂಧಮಂ ಲಯಕ್ಕೆ
ಇಕ್ಕುವೆನೆಂದು, ತಾಳ್ದು ತಪಮಂ ನಡೆಯುತ್ತ ಎಡೆಯೊಳ್, ಕೆಲಂಬರೊಳ್
ನಕ್ಕು ಕೆಲಂಬರೊಳ್ ಮುನಿದು ಬಾಳ್ವುದು ಇದೇಂ ? ಬಿಡಪೋಗಿ
ಮೂರುಗಂಟಿಕ್ಕಿದ ಗಾದೆಯಾದೆನ್ ಉಪಶಾಂತಿಯಂ ಈಯು ಅಪರಾಜಿತೇಶ್ವರಾ !

ಪೊಕ್ಕು ಸಮಾನಚಿತ್ತವನೆ-ಸಮತಾಭಾವವನ್ನು ಹೊಂದಿ, ಸಾಧಿಸಿ-ಸಾಧನೆಯಿಂದ, ಕರ್ಮ ನಿಬಂಧಮಂ-ಕರ್ಮದ ಬಂಧನವನ್ನು, ಲಯಕ್ಕೆ ಇಕ್ಕುವೆನೆಂದು-ನಾಶಮಾಡುವೆನೆಂದು, ತಪಮಂ ತಾಳ್ದು-ತಪಸ್ಸನ್ನು ತಾಳಿ, ನಡೆಯುತ್ತ ಎಡೆಯೊಳ್-ಆಚರಿಸುತ್ತಿರುವಾಗ, ಕೆಲಂಬರೊಳ್-ಕೆಲವರಲ್ಲಿ, ನಕ್ಕು-ಆದರತೋರಿ, ಕೆಲಂಬರೊಳ್ ಮುನಿದು-ಕೆಲವರಲ್ಲಿ ದ್ವೇಶಮಾಡಿ, ಬಾಳ್ವುದು ಇದೇಂ-ಬಾಳು ವುದು ಇದೆಂತಹುದು ? ಬಿಡಪೋಗಿ-(ಗಂಟನ್ನು) ಬಿಡಿಸಲು ಹೋಗಿ, ಮೂರು ಗಂಟಿಕ್ಕಿದ-ಮೂರು ಗಂಟುಮಾಡಿದ (ಕಗ್ಗಂಟುಮಾಡಿದ), ಗಾದೆಯಾದೆನ್-ಗಾದೆಯಂತೆ ಆದೆನು, ಉಪಶಾಂತಿಯಂ-ಸಮಾಧಾನವನ್ನು, ಈಯು-ಕೊಡು, ಅಪರಾಜಿತೇಶ್ವರಾ !

ಚಿತ್ತಸ್ವಾಸ್ಥ್ಯವನ್ನು ಹೊಂದಿ ಸಾಧನೆಯಿಂದ ಕರ್ಮಮಲವನ್ನು ತೊಳೆದುಕೊಂಡು, ಕರ್ಮದ ಕಟ್ಟುಗಳನ್ನು ನಾಶಮಾಡುವೆನೆಂದು ತಪಸ್ಸಿಗೆ ಅನುವಾದೆನು. ತಪಸ್ಸು ಧ್ಯಾನಾದಿಗಳನ್ನು ಆಚರಿ ಸುತ್ತ ಇರುವಾಗ ನನ್ನ ಮನಸ್ಸು ಪುನಃ ಚಂಚಲವಾಗಿ ರಾಗದ್ವೇಷಗಳಕಡೆ ವಾಲುವುದಲ್ಲಾ ? ತಪಸ್ವಿ ಯಾದರೂ ಕೆಲವರಲ್ಲಿ ಪ್ರೀತಿ ಆದರಗಳನ್ನು ತೋರುವ ಇಚ್ಛೆ : ಮತ್ತೆ ಕೆಲವರಲ್ಲಿ ದ್ವೇಷ ಅಸೂಯೆ ಗಳನ್ನು ಕಾರುವ ಮನೋಭಾವ. ಇದೆಂತಹ ಬಾಳು ನನ್ನದು ? ಸಿಕ್ಕಿನ ಗಂಟನ್ನು ಬಿಡಿಸಲು ಹೋಗಿ ಕಗ್ಗಂಟು ಮಾಡಿದಂತಾಯಿತು, ಮನಸ್ಸಿನಲ್ಲಿ ಸಮಾಧಾನ, ತೃಪ್ತಿಗಳೇ ಇಲ್ಲವಲ್ಲ ! ಭಗವಂತ ! ಮೊದಲು ನನ್ನ ಮನಸ್ಸಿಗೆ ಶಾಂತಿಯನ್ನು ನೀಡು ! ವೀತರಾಗತ್ವದಕಡೆ ನನ್ನನ್ನು ಎಳೆದೊಯ್ಯು !

ತುಟ್ಟಿದ ಪಟ್ಟಣಕ್ಕೆ ಪಯಣಂ ಬರುತಿರ್ದವನಲ್ಲಿಗಲ್ಲಿ ತಾಂ ।
ಬಿಟ್ಟೆಡೆಯೊಳ್ಪಲಂಬರೊಳಗೆಂತು ಸಮಂಬಡೆದಿರ್ಪನಂತೆ ಕ–॥
ಣ್ಣಿಟ್ಟು ನಿಜಾತ್ಮಸಿದ್ಧಿಗೆ ತಪಂಬಡೆವಂ ಪಲರಲ್ಲಿ ಮುಟ್ಟಿಯುಂ ।
ಮುಟ್ಟದ ಭಾವದಿಂ ನಡೆಯುವೇಳ್ಕುಮಲಾ ಅಪರಾಜಿತೇಶ್ವರಾ ! ॥೬೦॥

ತುಟ್ಟಿದ ಪಟ್ಟಣಕ್ಕೆ ಪಯಣಂ ಬರುತಿರ್ದವಂ ಅಲ್ಲಿಗಲ್ಲಿ ತಾಂ
ಬಿಟ್ಟ ಎಡೆಯೊಳ್ ಪಲಂಬರೊಳಗೆ ಎಂತು ಸಮಂಬಡೆದಿರ್ಪನ್,
ಅಂತೆ ಕಣ್ಣಿಟ್ಟು ನಿಜಾತ್ಮಸಿದ್ಧಿಗೆ ತಪಂಬಡೆವಂ ಪಲರಲ್ಲಿ ಮುಟ್ಟಿಯುಂ
ಮುಟ್ಟದ ಭಾವದಿಂ ನಡೆಯವೇಳ್ಕುಂ ಅಲಾ ಅಪರಾಜಿತೇಶ್ವರಾ !

ತುಟ್ಟಿದ ಪಟ್ಟಣಕ್ಕೆ–ಪ್ರಿಯವಾದ ನಗರಕ್ಕೆ, ಪಯಣಂ ಬರುತಿರ್ದವಂ–ಪ್ರಯಾಣ ಬರುತ್ತಿರುವವನು, ಅಲ್ಲಿಗಲ್ಲಿ–ಅಲ್ಲಲ್ಲಿ, ತಾಂ–ತಾನು, ಬಿಟ್ಟ ಎಡೆಯೊಳ್–ಬಿಟ್ಟ ಸ್ಥಳಗಳಲ್ಲೆಲ್ಲ, ಪಲಂಬರೊಳಗೆ–ಅನೇಕರಲ್ಲಿ, ಎಂತು–ಹೇಗೆ, ಸಮಂ ಪಡೆದಿರ್ಪನ್–ಸಮತಾಭಾವವನ್ನು ಪಡೆದಿರುತ್ತಾನೆಯೋ, ಅಂತೆ–ಹಾಗೆ, ಕಣ್ಣಿಟ್ಟು ನಿಜಾತ್ಮಸಿದ್ಧಿಗೆ–ತನ್ನ ಆತ್ಮಕಲ್ಯಾಣದಕಡೆ ದೃಷ್ಟಿಯನ್ನಿಟ್ಟು. ತಪಂ ಪಡೆವಂ–ತಪಸ್ಸನ್ನು ಹೊಂದುವವನು, ಪಲರಲ್ಲಿ–ಹಲವರಲ್ಲಿ, ಮುಟ್ಟಿಯುಂ–ಮುಟ್ಟಿಯೂ, ಮುಟ್ಟದ ಭಾವದಿಂ–ಮುಟ್ಟದ ರೀತಿಯಿಂದ, ನಡೆಯವೇಳ್ಕುಂ ಅಲಾ–ವರ್ತಿಸಬೇಕಲ್ಲವೇ ? ಅಪರಾಜಿತೇಶ್ವರಾ!

ವ್ಯಾಪಾರಿ ತನ್ನ ವ್ಯಾಪಾರದ ನಿಮಿತ್ತ ಅನೇಕ ಊರುಗಳನ್ನು ಸಂದರ್ಶಿಸುತ್ತ ಬರುತ್ತಿರಲು ಯಾವ ಒಂದು ಊರಿನಮೇಲೂ ಅದರ ಜನರಮೇಲೂ ಅನುರಾಗವಿಡುವುದಿಲ್ಲ. ತಾನು ಸೇರಬೇಕಾಗಿರುವ ಪಟ್ಟಣದಕಡೆ ಮಾತ್ರ ಅವನ ಲಕ್ಷ್ಯವಿರುತ್ತದೆ. ದಾರಿಯಲ್ಲಿ ಸಿಗುವ ಜನರಲ್ಲಿ ಅವನಿಗೆ ಪ್ರೀತಿಯೂ ಇಲ್ಲ, ದ್ವೇಷಭಾವನೆಯೂ ಇರುವುದಿಲ್ಲ, ಎಲ್ಲರಲ್ಲಿಯೂ ಸಮತಾಭಾವನೆಯನ್ನೇ ಹೊಂದಿರುವನು. ಇದೇರೀತಿ ಆತ್ಮಕಲ್ಯಾಣವೇ ತನ್ನ ಪರಮಗುರಿಯನ್ನಾಗಿಸಿಕೊಂಡು ತಪಸ್ಸನ್ನಾಚರಿಸುವ ಸಾಧಕನು, ಲೋಕದ ಜನರಲ್ಲಿ ಅಂಟಿಯೂ ಅಂಟದ ರೀತಿಯಲ್ಲಿ ವ್ಯವಹರಿಸಬೇಕು. ಊರಿನ ವ್ಯವಹಾರಗಳಲ್ಲಿ ತಲೆಹಾಕದೆ ತನ್ನಷ್ಟಕ್ಕೆ ತಾನಿದ್ದು ತನ್ನ ಕಲ್ಯಾಣವನ್ನು ಸಾಧಿಸಿಕೊಳ್ಳಬೇಕು, ಉದಾಸೀನ ಭಾವನೆಯಿಂದ ಉದಾತ್ತಗುಣಗಳು ಉದಯಿಸುತ್ತದೆ.

ಆವನೊಳಾದೊಡಂ ಕುಮತಿ ಕಾಳ್ನುಡಿ ಕೀಳ್ನಡೆ ತೋರುತಿರ್ದೊಡಾ ।
ಜೀವನೆ ನೈಜವೆನ್ನದೆ ತದೀಯ ಕಷಾಯಗುಣಂಗಳೆಂದವಂ ॥
ಭಾವಿಸಿ ಯಾ ಕಷಾಯತತಿ ತನ್ನೊಳಗಾಗದವೊಲ್ ನಿಜಾತ್ಮನಂ ।
ಕಾವುತಮಿರ್ಪವಂ ಸ್ವಪರವೇದಿಯಲಾ ಅಪರಾಜಿತೇಶ್ವರಾ ॥೬೧॥

ಆವನೊಳ್ ಆದೊಡಂ ಕುಮತಿ ಕಾಳ್ನುಡಿ ಕೀಳ್ನಡೆ ತೋರುತಿರ್ದೊಡೆ,
ಆ ಜೀವನೆ ನೈಜವೆನ್ನದೆ ತದೀಯ ಕಷಾಯಗುಣಂಗಳೆಂದು ಅವಂ
ಭಾವಿಸಿ, ಆ ಕಷಾಯತತಿ ತನ್ನೊಳಗೆ ಆಗದವೊಲ್ ನಿಜಾತ್ಮನಂ
ಕಾವುತಂ ಇರ್ಪವಂ ಸ್ವಪರವೇದಿಯಲಾ ಅಪರಾಜಿತೇಶ್ವರಾ !

ಆವನೊಳ್ ಆದೊಡಂ–ಯಾವನಲ್ಲಾದರೂ, ಕುಮತಿ–ದುರ್ಬುದ್ಧಿ, ಕಾಳ್ನುಡಿ–ದುರ್ವಚನ, ಕೀಳ್ನಡೆ–ದುರಾಚಾರ ಇವುಗಳು. ತೋರುತ ಇರ್ದೊಡೆ–ತೋರುತ್ತಿದ್ದರೆ, ಆ ಜೀವನೆ–ಅಂಥಹ ಅವಸ್ಥೆಯುಳ್ಳ ಜೀವಾತ್ಮನೇ, ನೈಜವೆನ್ನದೆ–ನಿಜವಾದವನೆಂದು ಹೇಳದೆ, ತದೀಯಕಷಾಯಗುಣಂಗಳೆಂದು ಅವಂ–ಅವು ಅವನಲ್ಲಿರುವ ರಾಗದ್ವೇಷ ಮುಂತಾದ ಕಷಾಯ ಪರಿಣಾಮಗಳ ಗುಣಗಳೆಂದು, ಭಾವಿಸಿ–ತಿಳಿದು, ಆ ಕಷಾಯತತಿ–ಆ ಕಷಾಯ ಸಮೂಹವು, ತನ್ನೊಳಗೆ ಆಗದವೊಲ್–ತನ್ನಲ್ಲಿ ಆಗದಂತೆ, ನಿಜಾತ್ಮನಂ–ತನ್ನ ಆತ್ಮನನ್ನು, ಕಾವುತಂ ಇರ್ಪವಂ–ಕಾಪಾಡುತ್ತಿರುವವನು, ಸ್ವಪರ ವೇದಿಯಲಾ–ತನ್ನ ಮತ್ತು ಪರವಸ್ತುಗಳ ಜ್ಞಾನವುಳ್ಳವನಲ್ಲವೇ ? ಅಪರಾಜಿತೇಶ್ವರಾ !

ಯಾವನಲ್ಲಾದರೂ ಕೆಟ್ಟಬುದ್ಧಿ, ಕೆಟ್ಟಮಾತು ಮತ್ತು ಕೆಟ್ಟ ನಡತೆಗಳು ಕಂಡರೂ, ಅವು ಆ ಆತ್ಮನ ನಿಜವಾದ ಸ್ವಭಾವಗಳಲ್ಲ ಎಂದು ತಿಳಿಯಬೇಕು. ಏಕೆಂದರೆ ಇವೆಲ್ಲ ಕರ್ಮದ ಪರಿಪಾಕದಿಂದ ಆದ ಪರಿಣಾಮಗಳು. ಈ ದುರ್ಗುಣಗಳೆಲ್ಲ ಪುದ್ಗಲಮಯವಾದ ಕಷಾಯಕರ್ಮಗಳೆಂದು ತಿಳಿದು ಕರುಣೆ ತೋರಬೇಕು. ಆದರೆ ಅಂಥ ಕಷಾಯಗಳು ತನ್ನಲ್ಲಿ ಮನೆಮಾಡದಂತೆ ಎಚ್ಚರವಹಿಸಬೇಕು. ಈ ಕಷಾಯಗಳಿಂದಲೇ ಆತ್ಮಘಾತ. ಆತ್ಮ ಇವುಗಳಿಗೆ ಬಲಿಬಿದ್ದರೆ ಕರ್ಮ ಆಡಿಸಿದಂತೆ ಆಡಿ ತನ್ನ ನೈಜಸ್ವರೂಪವನ್ನು ಮರೆತು ದುಃಖದಲ್ಲಿ ಮುಳುಗುವನು. "ಆತ್ಮಸ್ವಭಾವಂ ಪರಭಾವ ಭಿನ್ನಂ" ಎಂಬ ಈ ತತ್ತ್ವರಹಸ್ಯವನ್ನು ತಿಳಿದು ಬಾಳುವವನೇ ಜ್ಞಾನಿಯು. ಅವನೇ ಮುಕ್ತಿಪಥದಲ್ಲಿ ಸಾಗುತ್ತಿರುವ ಸಾಧಕ. ಮುಂದೆ ಮುಕ್ತಿಗೆ ಸಲ್ಲುವ ಭವ್ಯಾತ್ಮ.

ಗುಣಿಯೆನಿಸುತ್ತೆ ತಾಂ ನಡೆಯುತಿರ್ದೊಡಮನ್ಯರ ದುರ್ಗುಣಂಗಳಂ |
ಗಣಿಯಿಸಿದಂದು ತಾಂ ಗುಣವಿಹೀನನೆಯಂತದರಿಂದೆ ಸರ್ವರೊಳ್ ||
ಗುಣವನೆ ಕಾಣ್ಬೊಡುತ್ತಮಗುಣಕ್ಕವರಂ ತರಲಾರ್ಪೊಡೆಲ್ಲರಂ |
ಗಣಿಯಿಪುದಲ್ಲದಂದವರ ಚಿಂತೆಯದೇಕಪರಾಜಿತೇಶ್ವರಾ ! ||೬೨||

ಗುಣಿಯೆನಿಸುತ್ತೆ ತಾಂ ನಡೆಯುತಿರ್ದೊಡಂ ಅನ್ಯರ ದುರ್ಗುಣಂಗಳಂ
ಗಣಿಯಿಸಿದಂದು ತಾಂ ಗುಣವಿಹೀನನೆ, ಅಂತದರಿಂದೆ ಸರ್ವರೊಳ್
ಗುಣವನೆ ಕಾಣ್ಬೊಡೆ ಉತ್ತಮ ಗುಣಕ್ಕೆ ಅವರಂ ತರಲಾರ್ಪೊಡೆ,
ಎಲ್ಲರಂ ಗಣಿಯಿಪುದು ಅಲ್ಲದಂದು ಅವರ ಚಿಂತೆಯದೇಕೆ ಅಪರಾಜಿತೇಶ್ವರಾ !

ಗುಣಿಯೆನಿಸುತ್ತೆ ತಾಂ–ತಾನು ಗುಣವಂತನೆನಿಸುತ್ತ, ನಡೆಯುತಿರ್ದೊಡಂ–ವರ್ತಿಸುತ್ತಿದ್ದರೂ, ಅನ್ಯರ–ಬೇರೆಯವರ, ದುರ್ಗುಣಂಗಳಂ–ದುರ್ಗುಣಗಳನ್ನು, ಗಣಿಯಿಸಿದಂದು–ಎಣಿಸಿದಾಗ, ತಾಂ–ತಾನೂ, ಗುಣವಿಹೀನನೆ–ಹಾಗೆ ಗುಣರಹಿತನೇ ಸರಿ, ಅಂತದರಿಂದೆ–ಆದುದರಿಂದ, ಸರ್ವರೊಳ್–ಎಲ್ಲರಲ್ಲಿಯೂ, ಗುಣವನೆ ಕಾಣ್ಬೊಡೆ–ಗುಣವನ್ನೇ ನೋಡಬೇಕಾಗಿದ್ದರೆ. ಉತ್ತಮಗುಣಕ್ಕೆ ಅವರಂ ತರಲಾರ್ಪೊಡೆ–ಒಳ್ಳೆಯ ಗುಣಕ್ಕೆ ಅವರನ್ನು ತರುವುದಕ್ಕಾದರ, ಎಲ್ಲರಂ ಗಣಿಯಿಪುದು–ಎಲ್ಲರನ್ನೂ ಎಣಿಸಬೇಕು, ಅಲ್ಲದಂದು–ಇಲ್ಲದಿದ್ದರೆ, ಅವರಚಿಂತೆ ಅದೇಕೆ–ಅವರಚಿಂತೆ ಏಕೆ ಮಾಡಬೇಕು ? ಅಪರಾಜಿತೇಶ್ವರಾ !

ತಾನು ಸದ್ಗುಣಿಯಾಗಿರಬಹುದು, ಆದರೆ ಮತ್ತೊಬ್ಬರ ಗುಣಾವಗುಣಗಳತ್ತ ಬೊಟ್ಟುಮಾಡಿ ತೋರಿಸಿದರೆ, ಅವನನ್ನು ಸದ್ಗುಣಿಯೆಂದು ಕರೆಯಲಾಗದು. ಆಗ ಅವನೂ ಗುಣವಿಹೀನನಾಗುತ್ತಾನೆ. ಎಲ್ಲರಲ್ಲಿಯೂ ಸದ್ಗುಣಗಳನ್ನು ಗುರುತಿಸತಕ್ಕವನೇ ನಿಜವಾದ ಸದ್ಗುಣಿಯು. ಗುಣ ಅವಗುಣಗಳು ಆತ್ಮನಿಗೆ ಸಂಬಂಧಪಟ್ಟವುಗಳಲ್ಲ. ಅವು ಕರ್ಮಜನಿತವಾದುವು ಎಂದು ತಿಳಿಯುವವನೇ ಸದ್ಗುಣಸಂಪನ್ನನು. ಆದುದರಿಂದ ಬೇರೆಯೊಬ್ಬರ ಗುಣ ಅವಗುಣಗಳತ್ತ ನಮ್ಮ ಮನಸ್ಸು ಹರಿಯಬಾರದು. ದಯಾಭಾವದಿಂದ ದುರ್ಗುಣಿಯನ್ನು ಸನ್ಮಾರ್ಗದತ್ತ ತರಬೇಕೆಂಬ ಅಭಿಲಾಷೆಯಿದ್ದರೆ ಮತ್ತು ಹಾಗೆ ಮಾಡಲು ತನಗೆ ಆತ್ಮಶಕ್ತಿಯಿದ್ದರೆ ಮಾತ್ರ ದುರ್ಗುಣಿಗಳಕಡೆ ಕಣ್ಣು ಹಾಯಿಸಬಹುದು. ಇಲ್ಲದಿದ್ದರೆ ವೃಥ ಅವಹೇಳನ ಮಾಡುವುದರಿಂದ ಏನು ಪ್ರಯೋಜನ ? ತನಗೆ ಕರ್ಮಬಂಧ, ಬೇರೆಯವರಿಗೆ ಮಾನಸಿಕ ಹಿಂಸೆ.

ಸರ್ವಗುಣಂಗಳೊಳ್ಸುಲಭರಾರ್ ಜಿನ ನೀಂ ಪೊರಗಾಗಿ ಲೋಕದೊಳ್ |
ಪರ್ವಿದ ಮಿಥ್ಯೆಯೊಳ್ವಿಷಮಕಾಲದೊಳೀ ನರಕೀಟಕಂಗಳೊಳ್ ||
ಒರ್ವರೊಳಿರ್ದುದೊಂದು ಗುಣಮಂ ಗುಣಕೋಟಿಯೆನುತ್ತೆ ಕಂಡು ತಾ-|
ನುರ್ವುವವಂಗೆ ನಿನ್ನ ಗುಣಮೊಲ್ದಿರವೇ ಅಪರಾಜಿತೇಶ್ವರಾ ! ||೬೩||

ಸರ್ವಗುಣಂಗಳೊಳ್ ಸುಲಭರಾರ್ ಜಿನ ನೀಂ ಪೊರಗಾಗಿ, ಲೋಕದೊಳ್
ಪರ್ವಿದ ಮಿಥ್ಯೆಯೊಳ್ ವಿಷಮಕಾಲದೊಳ್ ಈ ನರಕೀಟಕಂಗಳೊಳ್,
ಒರ್ವರೊಳಿರ್ದುದು ಒಂದು ಗುಣಮಂ ಗುಣಕೋಟಿಯೆನುತ್ತೆ ಕಂಡು,
ತಾನ್ ಉರ್ವುವವಂಗೆ ನಿನ್ನ ಗುಣಂ ಒಲ್ದಿರವೇ ಅಪರಾಜಿತೇಶ್ವರಾ !

ಜಿನ ! ನೀಂ ಪೊರಗಾಗಿ–ನೀನು ಹೊರತಾಗಿ, ಸರ್ವಗುಣಂಗಳೊಳ್–ಎಲ್ಲಾ ಗುಣಗಳಲ್ಲಿಯೂ, ಸುಲಭರ್ ಆರ್–ಸುಲಭರಾಗಿರುವವರು, ಯಾರು ? ಲೋಕದೊಳ್–ಈ ಲೋಕದಲ್ಲಿ, ಪರ್ವಿದ–ಹಬ್ಬಿದ, ಮಿಥ್ಯೆಯೊಳ್–ಮಿಥ್ಯಾತ್ವದಲ್ಲಿ, ವಿಷಮಕಾಲದೊಳ್–ವಿಷಮಕಾಲದಲ್ಲಿ, ಈ ನರಕೀಟಕಂಗಳೊಳ್–ಈ ನರಕೀಟಾದಿಗಳಲ್ಲಿ, ಒರ್ವರೊಳ್–ಒಬ್ಬೊಬ್ಬರಲ್ಲಿ, ಇರ್ದುದು–ಇರುವ, ಒಂದು ಗುಣಮಂ–ಒಂದೊಂದು ಗುಣವನ್ನು, ಗುಣಕೋಟಿಯೆನುತ್ತೆ–ಕೋಟಿಗುಣಗಳೆಂದು, ಕಂಡು–ನೋಡಿ, ತಾನ್–ತಾನು, ಉರ್ವುವವಂಗೆ–ಉಬ್ಬುವವನಿಗೆ, ನಿನ್ನಗುಣಂ–ನಿನ್ನ ಗುಣಗಳು, ಒಲ್ದು ಇರವೇ–ಪ್ರಿಯವಾಗುವುದಿಲ್ಲವೇ ? ಅಪರಾಜಿತೇಶ್ವರಾ !

ಜಗತ್ತಿನಲ್ಲಿ ಸರ್ವಗುಣಸಂಪನ್ನನೆಂದರೆ ಭಗವಂತನೊಬ್ಬನೇ. ರಾಗದ್ವೇಷರಹಿತನಾಗಿ, ವೀತರಾಗಮಯನಾಗಿ, ಸದ್ಗುಣಸಂಪತ್ತಿಗೆ ಗಣಿಯಾಗಿದ್ದಾನೆ. ಮಿಥ್ಯಾತ್ವ ತುಂಬಿರುವ ಲೋಕದಲ್ಲಿ, ಈ ವಿಷಮಕಾಲದಲ್ಲಿ ದೋಷರಹಿತನಾದ ಮಾನವನನ್ನು ಕಾಣಲು ಸಾಧ್ಯವೇ ? ಎಲ್ಲಾ ಉತ್ತಮ ಗುಣಗಳು ಮನುಷ್ಯನಲ್ಲಿ ನೆಲೆಸಿದರೆ ಅವನು ಮಾನವನಾಗಿ ಉಳಿಯುವುದಿಲ್ಲ, ದೇವನಾಗುತ್ತಾನೆ. ಆದುದರಿಂದ ಈ ಲೋಕದಲ್ಲಿ ಭಗವಂತನೊಬ್ಬನನ್ನು ಬಿಟ್ಟು ಬೇರಾರೂ ಸರ್ವಸದ್ಗುಣಸಂಪನ್ನರಲ್ಲ. ಆದಾಗ್ಯೂ ಮಾನವರಲ್ಲಿ ಇರುವ ಕೆಲವಾದರೂ ಒಳ್ಳೆಯ ಗುಣಗಳನ್ನು ಗುರುತಿಸುವ ಸಹೃದಯ ನಮ್ಮಲ್ಲಿರಬೇಕು. ಬೇರೆಯವರಲ್ಲಿರುವ ದುರ್ಗುಣಗಳತ್ತ ನಮ್ಮ ದೃಷ್ಟಿ ಹೋಗಬಾರದು. ಈ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ಮಾತ್ರ ನಮ್ಮಲ್ಲಿ ಕಷಾಯಗಳ ಉಪಶಮನವಾಗಲು ಸಾಧ್ಯ, ಹಾಗೂ ಜಿನೇಂದ್ರನ ಗುಣಗಳು ನಮ್ಮಲ್ಲಿ ನೆಲೆಸಲು ಸಹಾಯಕವಾಗುತ್ತದೆ.

ದುರ್ವಿಷಯಂಗಳೆಂಬ ವಿಷಮಂ ಕುಡಿದಾರ್ತವಿರೋಧಮೋಹಮೆಂ-|
ಬುರ್ವಿನ ವತ್ಸನಾಭಿಯನೆ ಮೆಚ್ಚಿ ಕಿಡುತ್ತಿದೆ ಲೋಕವಕ್ಕಟಾ ! ||
ಸರ್ವರ ಮೆಯ್ಯೊಳಾ ವಿಷನಿವಾರಣೆಗಾತ್ಮನಿಜಸ್ವರೂಪದಾ |
ನಿರ್ವಿಷಮುಂಟದಂ ಮರೆದು ನೋವರದೇಕಪರಾಜಿತೇಶ್ವರಾ ! ||೭೮||

ದುರ್ವಿಷಯಂಗಳೆಂಬ ವಿಷಮಂ ಕುಡಿದು ಆರ್ತ ವಿರೋಧ ಮೋಹಮೆಂಬ
ಉರ್ವಿನ ವತ್ಸನಾಭಿಯನೆ ಮೆಚ್ಚಿ ಕಿಡುತ್ತಿದೆ ಲೋಕವು ! ಅಕ್ಕಟಾ !
ಸರ್ವರ ಮೆಯ್ಯೊಳ್ ಆ ವಿಷನಿವಾರಣೆಗೆ ಆತ್ಮನಿಜಸ್ವರೂಪದ ಆ
ನಿರ್ವಿಷಂ ಉಂಟು ಅದಂ ಮರೆದು ನೋವರ್ ಅದೇಕೆ ? ಅಪರಾಜಿತೇಶ್ವರಾ !

ದುರ್ವಿಷಯಂಗಳ್ ಎಂಬ-ದುಷ್ಟ ವಿಷಯಲಾಲಸೆಗಳೆಂಬ, ವಿಷಮಂ ಕುಡಿದು-ವಿಷವನ್ನು ಕುಡಿದು, ಆರ್ತ-ಆರ್ತಧ್ಯಾನ, ವಿರೋಧ-ದ್ವೇಷ, ಮೋಹಮೆಂಬ-ಮೋಹವೆಂಬ, ಉರ್ವಿನ-ಸೊಕ್ಕಿನ, ವತ್ಸನಾಭಿಯನೆ ಮೆಚ್ಚಿ-ವಿಷಮೂಲಿಕೆಯನ್ನೇ ಮೆಚ್ಚಿ, ಲೋಕವು ಕಿಡುತ್ತಿದೆ ಅಕ್ಕಟಾ !-ಲೋಕವು ನಾಶದಹಾದಿ ಹಿಡಿದಿದೆ ಅಯ್ಯೋ ! ಸರ್ವರ ಮೆಯ್ಯೊಳ್-ಎಲ್ಲರ ಶರೀರದಲ್ಲಿ, ಆ ವಿಷನಿವಾರಣೆಗೆ-ಆ ವಿಷಪರಿಹಾರಕ್ಕೆ, ಆತ್ಮನಿಜಸ್ವರೂಪದ-ತನ್ನ ಆತ್ಮಸ್ವರೂಪದ, ಆ ನಿರ್ವಿಷಂ ಉಂಟು-ಆ ವಿಷನಾಶಕವಾದ ಔಷಧಿಯಿದೆ, ಅದಂ ಮರೆದು-ಅದನ್ನು ಮರೆತು, ನೋವರ್ ಅದೇಕೆ-ಅದೇಕೆ ದುಃಖ ಪಡುತ್ತಾರೆ ? ಅಪರಾಜಿತೇಶ್ವರಾ !

ಲೋಕದ ಜನ ಭೋಗಾಭಿಲಾಷಿಗಳಾಗಿ, ಹಿತ ಅಹಿತಗಳನ್ನು ನೋಡದೆ ವಿಷಯಲಂಪಟರಾಗಿ, ದುರ್ವರ್ತನೆಗೊಳಗಾಗಿದ್ದಾರೆ, ವಿಷಯವೆಂಬ ವಿಷವನ್ನು ಕುಡಿದು ಆರ್ತ ರೌದ್ರಧ್ಯಾನಗಳಿಂದ ರಾಗ ದ್ವೇಷಗಳನ್ನು ಹೆಚ್ಚಿಸಿಕೊಂಡು ಮನಬಂದಂತೆ ನಡೆಯುತ್ತಿದ್ದಾರೆ. ಧನ, ಧಾನ್ಯ, ಸ್ತ್ರೀ, ವಸ್ತುವಾಹನಾದಿಗಳ ಪರಿಗ್ರಹಗಳಿಂದ ಧರ್ಮಾಂಧರಾಗಿ ಸೊಕ್ಕಿನಿಂದ ಮೆರಯುತ್ತಿದ್ದಾರೆ. ಈ ಹುಚ್ಚುತನವನ್ನು ನೋಡಿ ಅಯ್ಯೋ ! ಎನಿಸುತ್ತದೆ. ಎಲ್ಲರ ನರನಾಡಿಗಳಲ್ಲಿ ಹರಿಯುತ್ತಿರುವ ಈ ವಿಷವನ್ನು ಹೊರಹಾಕಲು ಇರುವ ಏಕೈಕ ಸಿದ್ಧೌಷಧವೆಂದರೆ ಆತ್ಮದರ್ಶನ. ಈ ವಿಷಾಪಹಾರ ಔಷಧಿ ಎಲ್ಲರಲ್ಲೂ ಇದೆ. ಆದರೆ ಅಜ್ಞಾನದಿಂದ ಅದರ ಇರವನ್ನು ಮರೆತು ದುಃಖಪಡುತ್ತಿದ್ದಾರೆ.

ಅರಿಯಲೆ ಚಿತ್ತಮೀಯದಘಸಂತತಿಯಾತ್ಮನನೆತ್ತಲಾನುಮೊ- |
ಲ್ದರಿದೊಡೆಯಸ್ತಬಿಸ್ತವನೆ ಮಾಡುವುದೊರ್ಮೆ ಯಥಾರ್ಥಮಾಗಿ ತಾ- ||
ನರಿದೊಡಮೇನೊ ತನ್ನೊಳಗೆ ತನ್ನನೆ ಭೇದಿಸಿ ಶುದ್ಧಸಿದ್ಧನೆಂ- |
ದರಿವಿನೊಳೀಕ್ಷಿಸಲ್ಕೆ ಬಿಡದಚ್ಚರಿ ನೋಡಪರಾಜಿತೇಶ್ವರಾ ! ||೭೫||

ಅರಿಯಲೆ ಚಿತ್ತಂ ಈಯದು ಅಘಸಂತತಿಯ ಆತ್ಮನಂ, ಎತ್ತಲಾನುಂ
ಒಲ್ದು ಅರಿದೊಡೆ ಅಸ್ತಬೆಸ್ತವನೆ ಮಾಡುವುದು, ಒರ್ಮೆ ಯಥಾರ್ಥಮಾಗಿ
ತಾನ್ ಅರಿದೊಡಂ ಏನೊ, ತನ್ನೊಳಗೆ ತನ್ನನೆ ಭೇದಿಸಿ ಶುದ್ಧಸಿದ್ಧನೆಂದು
ಅರಿವಿನೊಳ್ ಈಕ್ಷಿಸಲ್ಕೆ ಬಿಡದು, ಅಚ್ಚರಿ ನೋಡ, ಅಪರಾಜಿತೇಶ್ವರಾ !

ಅಘಸಂತತಿಯ–ಪಾಪಸಮೂಹದ, ಚಿತ್ತಂ-ಮನಸ್ಸು, ಆತ್ಮನಂ-ಆತ್ಮನನ್ನು, ಅರಿಯಲೆ-ತಿಳಿಯುವುದಕ್ಕೆ, ಈಯದು–ಬಿಡುವುದಿಲ್ಲವು, ಎತ್ತಲಾನುಂ–ಎಲ್ಲಿಯಾದರು, ಒಲ್ದು–ಪ್ರೀತಿಸಿ, ಅರಿದೊಡೆ–ತಿಳಿದರೆ, ಅಸ್ತಬೆಸ್ತವನೆ ಮಾಡುವುದು–ಆ ಮನಸ್ಸನ್ನು ಅಸ್ತವ್ಯಸ್ತವನ್ನಾಗಿ ಮಾಡುತ್ತದೆ. ಒರ್ಮೆ–ಒಂದು ವೇಳೆ, ಯಥಾರ್ಥಮಾಗಿ–ಯಥಾರ್ಥವಾಗಿ, ತಾನ್–ತಾನು, ಅರಿದೊಡಂ ಏನೊ–ಆತ್ಮನನ್ನು ತಿಳಿದರೂ ಏನು ಪ್ರಯೋಜನ ? ತನ್ನೊಳಗೆ ತನ್ನನೆ–ತನ್ನಾತ್ಮನಲ್ಲಿ ತನ್ನನ್ನೇ, ಭೇದಿಸಿ–ಪ್ರತ್ಯೇಕಿಸಿ, ಶುದ್ಧಸಿದ್ಧನೆಂದು–ಪರಿಶುದ್ಧನೂ ಸಿದ್ಧನೂ ಎಂದು, ಅರಿವಿನೊಳ್–ಜ್ಞಾನದಿಂದ, ಈಕ್ಷಿಸಲ್ಕೆ–ನೋಡುವುದಕ್ಕೆ, ಬಿಡದು–(ಆ ಪಾಪ ಸಮೂಹವು) ಬಿಡುವುದಿಲ್ಲ, ಅಚ್ಚರಿ ನೋಡ–ಏನಾಶ್ಚರ್ಯ ! ನೋಡು ! ಅಪರಾಜಿತೇಶ್ವರಾ !

ಪಾಪ ಕರ್ಮದ ಲೇಪ ಭಯಂಕರವಾದುದು, ಆತ್ಮನ ನೈಜ ಸ್ವರೂಪವನ್ನು ಚಿತ್ತದಿಂದ ಮರೆಮಾಡುತ್ತದೆ. ಪಾಪಕರ್ಮದ ದುಷ್ಪರಿಣಾಮದಿಂದ ಆತ್ಮಾನುಸಂಧಾನ ಬಹುದೂರ ಉಳಿಯುತ್ತದೆ. ಪ್ರಯತ್ನಿಸಿ ಯಾವಾಗಲಾದರೂ ಒಮ್ಮೆ ಆತ್ಮನನ್ನು ತಿಳಿಯಲು ಹೆಣಗಾಡಿದರೆ, ಪಾಪಕರ್ಮದ ದೆಸೆಯಿಂದ ಚಿತ್ತ ಅಸ್ತವ್ಯಸ್ತವಾಗಿ, ಏಕಾಗ್ರತೆ ತಪ್ಪಿ, ಆತ್ಮದರ್ಶನದ ಆಸೆ ಕೈಬಿಡಬೇಕಾಗುತ್ತದೆ. ಆತ್ಮಸ್ವರೂಪವನ್ನು ಶಾಸ್ತ್ರಾಭ್ಯಾಸದಿಂದ ತಿಳಿದರೂ ಏನು ಪ್ರಯೋಜನ. ಆ ಬ್ರಹ್ಮಾನಂದವನ್ನು ಅನುಭವಿಸಲು ಈ ಪಾಪಕರ್ಮ ಬಿಡುವುದಿಲ್ಲ. ನನ್ನ ಆತ್ಮ ನಿತ್ಯಾನಂದಮಯನೆಂದೂ, ಶುದ್ಧ ಬುದ್ಧನೆಂದೂ, ತಿಳಿಯಲು ಜ್ಞಾನಾವರಣೀಯ ಕರ್ಮ ಅಡ್ಡಬರುತ್ತದೆ, ಏನಿದು ಆಶ್ಚರ್ಯ !